# ಹಂಪಿ ಟೈಮ್ಸ್
HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 275 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 09.05.2025 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 275 • PRGI No:KARKAN/2023/88055 • VIJAYANAGARA • 09.05.2025 • Friday • Page:04 • Rs:2



1,30,000+
Digital E-PAPER READERS
To book Classified Display Ad
in HAMPI TIMES
Please call on
9448633038
No.1 HAMPI TIMES LEADING PRINT & DIGITAL District News Paper



ಹಂಪಿ ಟೈಮ್ಸ್
SCAN TO WATCH
SSLC ಹೈಸ್ಕೋರ್ ಸೀಕ್ರೇಟ್ ಏನು ಗೊತ್ತಾ
ಟಾಪರ್ ಇಂದುಶ್ರೀ ಮಾತಲ್ಲೇ ಕೇಳಿ...


### ನಿನಗೆ ನೀನೇ ಬೆಳಕು

ನೀವು ನಿದ್ದೆಯಲ್ಲಿದ್ದಾಗ ಕಾಣುವುದು ಕನಸಲ್ಲ. ನಿದ್ದೆ ಮಾಡಲು ನಿಮ್ಮನ್ನು ಬಿಡದೇ ಇರುವುದೇ ನಿಜವಾದ ಕನಸು.

– ಎ.ಪಿ.ಜೆ.ಅಬ್ದುಲ್ ಕಲಾಂ


Call Us for Advertisements
Good Opportunity for Branding
ನಿಮ್ಮೂರ ಜಾತ್ರೆ ಉತ್ಸವಕ್ಕೆ ಶುಭಾಶಯ, ಸಾಧಕರಿಗೆ/ ವಿದ್ಯಾರ್ಥಿಗಳಿಗೆ ಅಭಿನಂದನೆ ಕೋರಲು ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


### ದೇವಾಲಯ ದರ್ಶನ

ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

# ಗರ್ಭಿಣಿಯರ ಪಾದಗಳ ಬಾವುಗಳಿಗೆ ವೈದ್ಯರು ತಕ್ಷಣವೇ ಚಿಕಿತ್ಸೆ ನೀಡಿ

## ಡಿಎಚ್ಒ ಡಾ.ಯಲ್ಲಾ ರಮೇಶಬಾಬು ಸೂಚನೆ | ಆರೋಗ್ಯ ಶಿಕ್ಷಣ ಕೊಡಿ



■ ಹಂಪಿ ಟೈಮ್ಸ್ ಬಳ್ಳಾರಿ

ಗರ್ಭಿಣಿ ಮಹಿಳೆಯರಲ್ಲಿ ಪಾದಗಳ ಬಾವು ಅಪಾಯಕಾರಿ ಯಾಗಿದ್ದು, ಸಕಾಲಕ್ಕೆ ಅವರಿಗೆ ಮಾಡಿಸಬೇಕಾದ ತಪಾಸಣೆ ಹಾಗೂ ಚಿಕಿತ್ಸೆಯನ್ನು ತಡ ಮಾಡದಂತೆ ವೈದ್ಯರು ಕ್ರಮವಹಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶಬಾಬು ಅವರು ಹೇಳಿದರು.

ಕುರುಗೋಡು ತಾಲ್ಲೂಕಿನ ಕೊಳಗಲ್ಲು ಗ್ರಾಮದ ಆಯುಷ್ಮಾನ್ ಆರೋಗ್ಯ ಮಂದಿರದಲ್ಲಿ ಜರುಗಿದ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ ಮಕ್ಕಳಿಗೆ ಲಸಿಕೆ ಹಾಕಿಸಲು ಆಗಮಿಸಿದ ತಾಯಂದಿರು ಹಾಗೂ ಟಿಡಿ ಚುಚ್ಚುಮದ್ದು ಪಡೆಯಲು ಆಗಮಿಸಿದ ಗರ್ಭಿಣಿಯರೊಂದಿಗೆ ಆರೋಗ್ಯ ವಿಚಾರಿಸಿ ಮಾತನಾಡಿದರು. ಗಂಡಾಂತರ ಗರ್ಭಿಣಿಯರು ಎಂದು ಗುರ್ತಿಸಿದ ನಂತರ ಅವರ ನಿರಂತರ ನಿಗಾವಣೆಯಲ್ಲಿರಿಸಬೇಕು. ಒಂದು ವೇಳೆ ರಕ್ತದೊತ್ತಡ ಪರೀಕ್ಷೆ ಕೈಗೊಂಡ ನಂತರ ಕಂಡು ಬರುವ ವ್ಯತ್ಯಾಸವನ್ನು ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪರಿಶೀಲಿಸಬೇಕು ಎಂದರು.

ರಕ್ತಹೀನತೆ ಕಂಡುಬಂದಲ್ಲಿ ಸ್ಥಳೀಯವಾಗಿ ನೀಡುವ ಚಿಕಿತ್ಸೆಯಿಂದ (ಐಎಫ್ಎ ಮಾತ್ರೆ, ಐರನ್ ಸುಕ್ರೋಸ್, ರಕ್ತ ಹಾಕಿಸುವಿಕೆ) ಸುಧಾರಣೆಯಾಗದಿದ್ದಲ್ಲಿ ತಜ್ಞರ ಬಳಿ ತಪ್ಪದೆ ಕಳುಹಿಸಬೇಕು. ಅಗತ್ಯವಿದ್ದಲ್ಲಿ ಸ್ಕ್ಯಾನ್ ಮಾಡಿಸಬೇಕು ಎಂದು ಸೂಚಿಸಿದರು.

ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಪುನಃ ಗರ್ಭಿಣಿಯಾಗುವ ಅವಧಿಯನ್ನು ಕನಿಷ್ಟ 3 ವರ್ಷಕ್ಕೆ ಕಡ್ಡಾಯವಾಗಿ ಮುಂದೂಡಬೇಕು. ಇದಕ್ಕಾಗಿ ಅಂತರ ಚುಚ್ಚುಮದ್ದು, ಕಾಪರ–ಟಿ, ನೀರೊಧ ಕುರಿತು ಆರೋಗ್ಯ ಶಿಕ್ಷಣ ನೀಡಲು ಮರೆಯಬಾರದು. ಅತಿ ಮುಖ್ಯವಾಗಿ ಗರ್ಭಿಣಿಗೆ ಮೇಲ್ಮಟ್ಟದ ಆಸ್ಪತ್ರೆಗೆ ರೇಫರ್ ಮಾಡುವಾಗ 108 ಆರೋಗ್ಯ ಕವಚ ಬರುವ ಸಮಯ ತಡವಾಗುವ ಸಾಧ್ಯತೆ ಇದ್ದಲ್ಲಿ ತಕ್ಷಣೇ ವೈದ್ಯಾಧಿಕಾರಿಗಳು ಪರ್ಯಾಯ ಸಾರಿಗೆ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದರು.

ರಕ್ತಹೀನತೆ ಎಂದು ಕಂಡು ಬಂದಲ್ಲಿ ಐರನ್ ಸುಕ್ರೋಸ್ 200 ಮಿಲಿ ಗ್ರಾಂ ಪ್ರತಿ ಮೂರು ದಿನಕ್ಕೊಮ್ಮೆ 05 ಇಂಜಕ್ಷನ್ ಕೊಡಿಸಬೇಕು. ವೈದ್ಯಾಧಿಕಾರಿಗಳು ತಮ್ಮ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರಿಗೆ ಗಂಡಾಂತರ ಗರ್ಭಿಣಿಯರ ಮನೆ ಭೇಟಿ ಹಾಗೂ ಆರೋಗ್ಯದ ಸ್ಥಿತಿ ಕುರಿತು ಪ್ರತಿವಾರ ಚರ್ಚಿಸಬೇಕು ಎಂದರು.

ಹೆರಿಗೆ ವಿಷಯವನ್ನು ಆದ್ಯತೆ ಇಟ್ಟುಕೊಂಡು ಸ್ಥಳೀಯ ಗ್ರಾಮ ಪಂಚಾಯತ ಅಧ್ಯಕ್ಷರು ಹಾಗೂ ಸದಸ್ಯರೊಂದಿಗೆ ಸಮನ್ವಯ ಸಭೆ ಕೈಗೊಳ್ಳಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೆರಿಗೆಗೆ ಗರ್ಭಿಣಿ ಬಂದಾಗ ಅಗತ್ಯ ಪರೀಕ್ಷೆ ಮೂಲಕ ಹೆರಿಗೆ ನಿರ್ವಹಿಸಬೇಕು ಎಂದು ಹೇಳಿದರು.

ಗಂಭೀರತೆ ಕಂಡುಬಂದರೆ ತಡ ಮಾಡದೆ ಸಿಬ್ಬಂದಿ ಸಹಿತ ರೇಫರ್ ಮಾಡುವುದನ್ನು ಮರೆಯಬಾರದು. ಧಾರ್ಮಿಕ ಸ್ಥಳಗಳಿಗೆ ಗರ್ಭಿಣಿಯರು ತಮ್ಮ ಆರೋಗ್ಯ ಸಮಸ್ಯೆಗಳಿಗೆ ಪದೇ ಪದೇ ಭೇಟಿ ನೀಡುತ್ತಿದ್ದರೆ, ಅಂತ ಧಾರ್ಮಿಕ ಕೇಂದ್ರಗಳಿಗೆ ಭೇಟಿ ಮಾಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಸೂಚಿಸುವಂತೆ ತಪ್ಪದೇ ವಿನಂತಿಸಬೇಕು ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳು ಹೇಳಿದರು. >>4

# 21 ವರ್ಷ ಸೇವೆ ಸಲ್ಲಿಸಿ ಮರಳಿದ ಯೋಧನಿಗೆ ಹುಟ್ಟೂರಲ್ಲಿ ಅದ್ದೂರಿ ಸ್ವಾಗತ



■ ಹಂಪಿ ಟೈಮ್ಸ್ ಕೂಡ್ಲಿಗಿ

ತಾಲ್ಲೂಕಿನ ಕ್ಯಾಸನಕೆರೆ ಗ್ರಾಮದ ಶರಣೇಶ್ ಜಿ ಯಾದವ್ ಅವರು 21 ವರ್ಷಗಳ ಕಾಲ ಯೋಧರಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿ ಬುಧವಾರ ಗ್ರಾಮಕ್ಕೆ ಬಂದ ಅವರನ್ನು ಗ್ರಾಮಸ್ಥರು, ಸ್ನೇಹಿತರು ಅದ್ದೂರಿಯಾಗಿ ಸ್ವಾಗತಿಸಿದರು.

ಕೂಡ್ಲಿಗಿ ಪಟ್ಟಣದ ಮಹಾತ್ಮ ಗಾಂಧೀಜಿಯವರ ಚಿತ್ತಾ ಭಸ್ಮಕ್ಕೆ ಪುಷ್ಪ ನಮನ ಪೂಜೆ ಸಲ್ಲಿಸಿ ನಂತರ ಸ್ವಗ್ರಾಮ ಕ್ಯಾಸನಕೆರೆಯಲ್ಲಿ ಗ್ರಾಮದ ಜನರು ಭವ್ಯ ಸ್ವಾಗತ ಕೋರಿದರು. ಯೋಧನ ಪರ ಘೋಷಣೆ ಹಾಕಿ ಆರತಿ ಬೆಳಗಿ, ಪಟಾಕಿ ಸಿಡಿಸಿ, ಪುಷ್ಪಾರ್ಚನೆ ಮಾಡಿ ಸ್ವಾಗತಿಸಿದರು. ನಂತರ ತೆರೆದ ವಾಹನದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಡಿಜೆ ಮೆರವಣಿಗೆಯಲ್ಲಿ ಅದ್ದೂರಿಯಾಗಿ ಮೆರವಣಿಗೆ ಹಾಗೂ ವಿವಿಧ ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

2004ರಲ್ಲಿ ರಾಜಸ್ಥಾನದಲ್ಲಿ ಪ್ರಥಮವಾಗಿ ಸೇನೆಗೆ ಹಾಜರಾಗಿದ್ದು, ನಂತರ ತ್ರಿಪುರ, ನಾಗಾಲ್ಯಾಂಡ್, ಮಣಿಪುರ, ಚತ್ತೀಸ್‌ಗಡ, ಬೆಂಗಾಲ್, ಒಡಿಶಾ ಹರ್ಯಾಣ ಸೇರಿದಂತೆ ವಿವಿಧಡೆ ಬರೊಬ್ಬರಿ 21 ವರ್ಷ ಭಾರತೀಯ ಸೇನೆಯಲ್ಲಿ ಪ್ರಾಣದ ಹಂಗು ತೊರೆದು ಕೆಲಸ ಮಾಡಿ ತವರಿಗೆ ಬರೋದು ಅಂದ್ರೆ ಮರು ಹುಟ್ಟು ಪಡೆದಂತೆ ಹಾಗಾಗಿಗೇ ಅವರ ಆಗಮನ ಊರಿನಲ್ಲಿ ಹಬ್ಬದ ವಾತಾವರಣ ಸೃಷ್ಟಿ ಮಾಡಿತ್ತು. ಗ್ರಾಮದ ಜನರು ಬಂಧುಗಳು, ಸ್ನೇಹಿತರೆಲ್ಲಾ ಸೇರಿ ಭವ್ಯ ಸ್ವಾಗತ ಕೋರಿ ವೀರ ಸೇನಾನಿಯ ಸೇವೆಯನ್ನ ಕೊಂಡಾಡಿದ್ರು. ಇನ್ನು 21ವರ್ಷ ಮನೆಯಿಂದ ದೂರವಿದ್ದು ದೇಶಕ್ಕಾಗಿ ಬದುಕಿದ್ದ ಮನೆ ಮಗ ಮನೆಗೆ ಬಂದಾಗ ಮನೆಯಲ್ಲಿ ಸಂಭ್ರಮ ಸಡಗರ ಮೇಳೈಸಿತ್ತು. ಎಲ್ಲೆಲ್ಲೂ ಹೂವು ಚೆಲ್ಲಿ ಭಾರತ್ ಮಾತಾಕಿ ಜೈ ಎಂದು ಘೋಷಣೆ ಕೂಗಿ ಮನೆಗೆ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ತಾಲೂಕು ದಂಡಾಧಿಕಾರಿ ವಿ.ಕೆ ನೇತ್ರಾವತಿ, ಕೂಡ್ಲಿಗಿ ಸಿಪಿಐ ಪ್ರಹ್ಲಾದ್ ಚನ್ನಗಿರಿ, ವಿಜಯನಗರ ಜಿಲ್ಲಾ ಸಿಎಪಿಎಫ್ ಸಂಘದ ಅಧ್ಯಕ್ಷ ಕಾಟೆರ್ ರಮೇಶ್, ಉಪಾಧ್ಯಕ್ಷ ಎಚ್ ಗಂಗಣ್ಣ, ಆನಂದಪ್ಪ, ಮುಜುಬ್ ರಹಿಮಾನ್, ಪರಮೇಶ, ಅಂಬರೀಶ್, ರಾಘವೇಂದ್ರ, ಹಾಲಿ ಯೋಧ ಧರ್ಮಪ್ಪ, ವಿಜಯನಗರ ಜಿಲ್ಲಾ ಸಿಎಪಿ ಎಫ್ ಸಂಘದ ನಿವೃತ್ತಿ ಯೋಧರು, ಹಾಲಿ ಯೋಧರು, ಊರಿನ ಗ್ರಾಮಸ್ಥರು, ಕುಟುಂಬಸ್ಥರು, ಸ್ನೇಹಿತರು ಪಾಲ್ಗೊಂಡಿದ್ದರು.

# ಕೆಲ ಪಾಕ್‌ಪ್ರಜೆಗಳು ನ್ಯಾಯಾಲಯದ ಮೊರೆ ಕೇಂದ್ರದ ಸೂಚನೆಗಳನ್ನು ಪಾಲಿಸಲಾಗುತ್ತಿದೆ : ಸಿಎಂ



■ ಹಂಪಿ ಟೈಮ್ಸ್ ಮಂಡ್ಯ

ಪಾಕಿಸ್ತಾನದಲ್ಲಿ ಅಡಗಿರುವ ಉಗ್ರರ ನೆಲೆಗಳ ಮೇಲೆ ಭಾರತ ದಾಳಿ ಮಾಡಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಸೂಚನೆ ಯಂತೆ ಎಲ್ಲೆಡೆ ಅಣುಕು ಕವಾಯತು ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮದ್ದೂರು ಕಾಫಿ ಡೇ ಹತ್ತಿರದ ಗೆಜ್ಜಲಗೆರೆ ಹೆಲಿಪ್ಯಾಡ್ ನಲ್ಲಿ ಬಂದಿಳಿದು ಕಾರ್ಯಕ್ರಮಕ್ಕೆ ತೆರಳುವ ಮುನ್ನ ಗುರುವಾರ ಮಾಧ್ಯಮವದರೊಂದಿಗೆ ಮಾತನಾಡಿದರು.

**ಎಲ್ಲೆಡೆ ಎಚ್ಚರಿಕೆ:** ಅಣೆಕಟ್ಟುಗಳ ಸುರಕ್ಷತೆಯ ದೃಷ್ಟಿಯಲ್ಲಿ ಎಲ್ಲೆಡೆ ಎಚ್ಚರಿಕೆ ನೀಡಲಾಗಿದ್ದು, ಯಾವ ಘಳಿಗೆಯಲ್ಲಿ ಏನಾದರೂ ಆಗಬಹುದು ಎಂದು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

**ದೇವಾಲಯಗಳಲ್ಲಿ ಪೂಜೆ:** ಮುಜರಾಯಿ ಇಲಾಖೆ ದೇವಾಲಯ ಗಳಲ್ಲಿ ಪೂಜೆ ಮಾಡುವ ಬಗ್ಗೆ ಸಚಿವ ರಾಮಲಿಂಗಾರೆಡ್ಡಿಯವರೊಂದಿಗೆ ಮಾತನಾಡಿ ಕ್ರಮ ತೆಗೆದುಕೊಂಡಿದ್ದಾರೆ ಎಂದರು.

ರಾಜ್ಯದಿಂದ ಪಾಕಿಸ್ತಾನದ ಪ್ರಜೆಗಳು ಬಹುತೇಕ ಗಡಿಪಾರಾಗಿದ್ದಾರೆ. ಪಾಕಿಸ್ತಾನದ ಪ್ರಜೆಗಳನ್ನು ಗಡಿಪಾರು ಮಾಡಿಲ್ಲ ಎಂದು ಬಿಜೆಪಿ ಆರೋಪಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಗಡಿಪಾರು ಮಾಡಲಾಗಿದೆ. ಮೈಸೂರಿನಲ್ಲಿ ಇರುವವರು ನ್ಯಾಯಾಲಯದ ಮೊರೆ ಹೋಗಿದ್ದಾರೆ. ಅಂಥವರು ಮಾತ್ರ ಉಳಿದುಕೊಂಡಿರುವುದು ಬಿಟ್ಟರೆ ಬಹುತೇಕ ಎಲ್ಲರೂ ಗಡಿಪಾರು ಆಗಿದ್ದಾರೆ, ಎಷ್ಟು ಜನ ಉಳಿದಿದ್ದಾರೆ ಎಂಬ ಮಾಹಿತಿ ಇಲ್ಲ ಎಂದರು.

# ಎಸ್ಸೆಸ್ಸೆಲ್ಸಿ ಪರೀಕ್ಷೆ–2 : ನೋಂದಣಿಗೆ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1 ರಲ್ಲಿ ಉತ್ತೀರ್ಣರಾಗದ ವಿದ್ಯಾರ್ಥಿಗಳು ಮೇ 26 ರಿಂದ ಜೂನ್ 02 ರವರೆಗೆ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ರ ಪರೀಕ್ಷೆಗೆ ನೋಂದಾಯಿಸಿಕೊಳ್ಳಬಹುದು.

ಜಿಲ್ಲೆಯ 04 ತಾಲ್ಲೂಕುಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ನಡೆಯಲಿವೆ. ಪ್ರಥಮ ಬಾರಿಗೆ ಪರೀಕ್ಷೆಗೆ ನೋಂದಣಿಯಾಗುವ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿಯಿಂದ ವಿನಾಯಿತಿ ಇದ್ದು, ವಿದ್ಯಾರ್ಥಿಗಳು ಮೇ 10 ರೊಳಗಾಗಿ ನೋಂದಾಯಿಸಿಕೊಳ್ಳಬಹುದು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಬಿ.ಉಮಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು 6ನೇ ತರಗತಿ ಪ್ರವೇಶಾತಿಗೆ ಅರ್ಹತಾ ಪರೀಕ್ಷೆ

## ಪರೀಕ್ಷಾ ಕೇದ್ರದ ಸುತ್ತಲೂ 200 ಮೀಟರ್ ಆವರಣ ನಿರ್ಬಂಧಿತ ಪ್ರದೇಶ

■ ಹಂಪಿ ಟೈಮ್ಸ್ ಹೊಸಪೇಟೆ

2024–25ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ 6ನೇ ತರಗತಿ ಪ್ರವೇಶಾತಿಗೆ ಸೇರ್ಪಡೆ ಮಾಡುವ ಅರ್ಹತಾ ಪರೀಕ್ಷೆಗಳು ಮೇ.9 ರಂದು ನಗರದ ದೀಪಾಯನ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆಯಲಿದ್ದು, ಪರೀಕ್ಷೆಗಳು ಸುಗಮವಾಗಿ ನಡೆಯುವ ಹಿತದೃಷ್ಟಿಯಿಂದ ಮತ್ತು ಪರೀಕ್ಷಾ ಕೇದ್ರದ ಸುತ್ತಲೂ 200 ಮೀಟರ್ ಆವರಣದಲ್ಲಿ ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್, ಸೈಬರ್, ಕಂಪ್ಯೂಟರ್ ಅಂಗಡಿಗಳನ್ನು ಮುಚ್ಚುವಂತೆ ಹಾಗೂ ಪರೀಕ್ಷಾ ಕೇಂದ್ರಗಳ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿಗಳು ಮತ್ತು ಗುಂಪುಗಳಿಗೆ ಪ್ರವೇಶವಿರುವುದಿಲ್ಲ ಎಂದು ಆದೇಶಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


JnanaSudha
Karkala – Udupi - Manipal
Registration for
NEET/JEE-Main - 2026 Long Term
Starts from 06.05.2025
Interested students may log on to
www.jnanasudha.org
and register their names
Hostel facility is available at
Karkala only for 100 students
For more information you may call us on
Karkala : 8095510090, 9113535743
Manipal : 9901522783

# ಮೈಶುಗರ್ ಕಾರ್ಖಾನೆಗೆ 50 ಕೋಟಿ ರೂ., ವಿದ್ಯುತ್ ಬಿಲ್, ದಂಡವನ್ನೂ ಮನ್ನಾ : ಸಿ.ಎಂ



■ **ಹಂಪಿ ಟೈಮ್ಸ್ ಮಂಡ್ಯ**

ಮಂಡ್ಯ ಜನ ಒರಟರಂತೆ ಕಂಡರೂ, ಸಹಾಯ ಸ್ಮರಿಸುವ ಹೃದಯವಂತರು. ನಾಡಿಗೆ ಕೃಷಿ ಮೂಲಕ ಅನ್ನ ಕೊಡುವ ಅನ್ನದಾತರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲ್ಲೂಕು ಕುರುಬರ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೂತನ ಹಾಸ್ಟೆಲ್ ಕಟ್ಟಡಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು. ನೂತನ ಹಾಸ್ಟೆಲ್ ಕೇವಲ ಕುರುಬರ ಮಕ್ಕಳಿಗೆ ಮಾತ್ರವಲ್ಲ, ಎಲ್ಲಾ ಜಾತಿಯ ಬಡವರಿಗೂ ಅವಕಾಶ ಇರುತ್ತದೆ ಎಂದರು. ದಾನಿಗಳು ಕೊಟ್ಟಷ್ಟು ಕೊಡಲಿ. ನಾನೂ ಸಹಾಯ ಮಾಡುತ್ತೇನೆ. ಮಂಡ್ಯದ ಜನ ಹತ್ತಾರು ವರ್ಷಗಳಿಂದ ನನಗೆ ಬಂಬಲ ಕೊಡುತ್ತಲೇ ಬರುತ್ತಿದ್ದಾರೆ ಎಂದರು.

**ಮಂಡ್ಯ ಜನ ಒರಟರಂತೆ ಕಂಡರೂ, ಸಹಾಯ ಸ್ಮರಿಸುವ ಹೃದಯ ವಂತರು:**

ನಾಲ್ವಡಿ ಅರಸರನ್ನು ನಾವು ಸದಾ ಸ್ಮರಿಸಬೇಕು. ಮಂಡ್ಯದ ಪ್ರಗತಿಯಲ್ಲಿ ಇವರ ಕೊಡುಗೆ ಅಪಾರ. ನಮ್ಮ ಸರ್ಕಾರ ಮೈಶುಗರ್ ಕಾರ್ಖಾನೆಗೆ 50 ಕೋಟಿ ಕೊಟ್ಟಿದ್ದಷ್ಟೆ ಅಲ್ಲ, ವಿದ್ಯುತ್ ಬಿಲ್ , ದಂಡ ಎರಡನ್ನೂ ಮನ್ನಾ ಮಾಡಿದ್ದೇವೆ ಎಂದರು.

ನಾನು ಮಂಡ್ಯದ ಈ ಹಾಸ್ಟೆಲ್ ಕಟ್ಟಡ ಶಿಥಿಲ ಆಗಿದ್ದನ್ನು ನೋಡಿದ್ದೆ. ಅನುದಾನ ಕೊಡಲು ಸರ್ಕಾರ ಸಿದ್ದವಿದೆ ಎಂದು ಹೇಳಿದ್ದೆ. ಹಿಂದುಳಿದ ವರ್ಗದ ಮಕ್ಕಳಿಗೆ ಶಿಕ್ಷಣ ಸಿಗಬೇಕು ಎನ್ನುವ ಉದ್ದೇಶ ಈಡೇರಬೇಕಾದರೆ ಹಾಸ್ಟೆಲ್ ಗಳ ಅಗತ್ಯವಿದೆ. ಹಳ್ಳಿಗಾಡಿನ ಮಕ್ಕಳೂ ವೈದ್ಯರು, ಎಂಜಿನಿಯರ್ ಗಳಾಗಬೇಕು. ಕೇವಲ ಒಂದು ವರ್ಗದವರು ಮಾತ್ರ ಆಗಬಾರದು, ಎಲ್ಲರಿಗೂ ಶಿಕ್ಷಣ ಸಿಗಬೇಕು. ಇವತ್ತೇನಾದರೂ ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ ಉಳಿದಿದ್ದರೆ, ವೈದ್ಯ ಕಾಲೇಜು, ಕೃಷಿ ವಿವಿ ಬಂದಿದೆ ಎಂದರೆ ಅದಕ್ಕೆ ಕಾಂಗ್ರೆಸ್ ಸರ್ಕಾರದ ಸಚಿವ ಚಲುವರಾಯಸ್ವಾಮಿ ಅವರ ಕಾಳಜಿ, ಶ್ರಮ ಕಾರಣ ಎಂದು ಸ್ಪಷ್ಟಪಡಿಸಿದರು. ಕಳೆದ ವರ್ಷ ಮಳೆ-ಬೆಳೆ ಚನ್ನಾಗಿ ಆಗಿದೆ. ಸಿದ್ದರಾಮಯ್ಯ ಅವರ ಕಾಲಗುಣ ಸರಿ ಇಲ್ಲ ಎಂದು ಟೀಕಿಸುತ್ತಿದ್ದ ಬಿಜೆಪಿ-ಜೆಡಿಎಸ್ ನವರಿಗೆ ಮಳೆಯೇ ಉತ್ತರ ಕೊಟ್ಟಿದೆ. ಈ ವರ್ಷವೂ ಉತ್ತಮ ಮಳೆ ಬೆಳೆ ಆಗುವ ಭರವಸೆ ಇದೆ ಎಂದರು.

ಬಿಜೆಪಿ ನಿರಂತರವಾಗಿ ಸುಳ್ಳು ಹೇಳಿಕೊಂಡು ತಿರುಗುತ್ತಿದೆ. ಸರ್ಕಾರದ ಬೊಕ್ಕಸ ಖಾಲಿ ಎನ್ನುತ್ತಿದ್ದಾರೆ. ಒಂದು ಲಕ್ಷದ 35 ಸಾವಿರ ಕೋಟಿ ರೂಪಾಯಿಯನ್ನು ಅಭಿವೃದ್ಧಿಗೆ ತೆಗೆದಿರಿಸಿದ್ದೇವೆ. ಇದು ಜನರಿಗೆ ಕಾಣುತ್ತದೆ, ಬಿಜೆಪಿಯವರಿಗೆ ಕಾಣುತ್ತಿಲ್ಲ. ಯಾರ್ಯಾರು ಅಕ್ಷರ ಸಂಸ್ಕೃತಿ ಮತ್ತು ಸಾಮಾಜಿಕ ಅವಕಾಶಗಳಿಂದ ವಂಚಿತರಾಗಿದ್ದಾರೋ ಅವರೆಲ್ಲರ ಪರವಾಗಿ ನಮ್ಮ ಸರ್ಕಾರ ಇರುತ್ತದೆ ಎಂದರು.


## ನಿಮ್ಮ ಬೆಂಬಲವೇ ನಮ್ಮ ಬಲ

ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆಯನ್ನು ಅಭಿವೃದ್ಧಿಪಡಿಸಬೇಕಾದರೆ, ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕೈಜೋಡಿಸಬೇಕಿದೆ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಫೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂವು ನಿರೀಕ್ಷಿಸಲಾಗದು. ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ನಿಮ್ಮ ಬೆಂಬಲವೇ ನಮ್ಮ ಕಾಯಕಕ್ಕೆ ಬಲ.

**ಹಂಪಿ ಟೈಮ್ಸ್, ಹೊಸಪೇಟೆ : ಮೊ: 9448633038**



## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

M: 94486 33038



## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**


## ಈ ನಮ್ಮ ಸಮಾಜ ಸಾಕ್ಷರ ಸಮಾಜವಾಗಲು ಶಾಲೆಗಳು, ಉಪಾಧ್ಯಾಯರು, ಇಲಾಖೆ ಹೇಗೆ ಬದಲಾಗಬೇಕೆಂದು ತೀವ್ರ ಒಳನೋಟವನ್ನು ಬೀರಿದ ಕೃತಿ

# ರಂಗಣ್ಣನ ಕನಸಿನ ದಿನಗಳು

ಶ್ರೀ ಎಂ.ಆರ್. ಶ್ರೀನಿವಾಸ ಮೂರ್ತಿಯವರು ಕನ್ನಡದ ಬಹುದೊಡ್ಡ ಸಾಹಿತಿಗಳು. ಮೈಸೂರು ರಾಜ್ಯದ ವಿದ್ಯಾ ಇಲಾಖೆಯಲ್ಲಿ ಬಹಳ ವರ್ಷಗಳ ಕಾಲ ಅಧಿಕಾರಿಗಳಾಗಿ ಜಿಲ್ಲಾ ಟಿ.ಸಿ.ಎಚ್ ಕಾಲೇಜಿನ ಪ್ರಿನ್ಸಿಪಾಲರಾಗಿ ಕಾರ್ಯನಿರ್ವಹಿಸಿ ಇಲಾಖೆಯ ಕುರಿತು ಆಳವಾದ ತಿಳಿವಳಿಕೆ ಉಳ್ಳವರಾಗಿದ್ದರು. ಸ್ವಾತಂತ್ರ್ಯಪೂರ್ವ ಮೈಸೂರು ರಾಜ್ಯದ ವಿದ್ಯಾ ಇಲಾಖೆ ಹೇಗೆ ಮುನ್ನಡೆಯಬೇಕೆಂದು ಮುನ್ನೋಟ ಬೀರಿದ್ದರು. ಈ ನಮ್ಮ ಸಮಾಜ ಸಾಕ್ಷರ ಸಮಾಜವಾಗಲು ಶಾಲೆಗಳು, ಉಪಾಧ್ಯಾಯರು, ಇಲಾಖೆ ಹೇಗೆ ಬದಲಾಗಬೇಕೆಂದು ತಮ್ಮ ಕೃತಿಗಳಲ್ಲಿ ತೀವ್ರ ಒಳನೋಟವನ್ನು ಬೀರಿದ್ದಾರೆ.

ಆಧುನಿಕ ಕನ್ನಡ ಶಿಲ್ಪಿಗಳಲ್ಲಿ ಒಬ್ಬರೆಂದು ಖ್ಯಾತಿಗೊಂಡ ಶ್ರೀಯುತರು ಅನೇಕ ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಮಹಾತ್ಯಾಗ, ಸಾವಿತ್ರಿ (ಕಾದಂಬರಿ), ಕಂಠೀರವ ವಿಜಯ, ಧರ್ಮದುರಂತ, ನಾಗರಿಕ, ಕವಿಯ ಸೋಲು, ರೂಲ್ಸ್ ಮೇಷ್ಟ್ರು (ನಾಟಕಗಳು), ಸಾಹಿತ್ಯಾಲೋಕ ( ಬಿಡಿ ಲೇಖನಗಳ ಸಂಗ್ರಹ ), ವಚನಧರ್ಮಸಾರ, ಭಕ್ತಿಭಂಡಾರಿ ಬಸವಣ್ಣನವರು ಇಷ್ಟು ಶ್ರೀಯುತರ ಮುಖ್ಯ ಕೃತಿಗಳು.

ರಂಗಣ್ಣನ ಕನಸಿನ ದಿನಗಳು ಎನ್ನುವ ಇನ್ನೂರ ನಲವತ್ತು ಪುಟಗಳ ಈ ಪುಸ್ತಕವು ಮೂವತ್ತು ಅಧ್ಯಾಯಗಳಲ್ಲಿ ವಿಂಗಡಣೆಯಾಗಿದೆ. ಇದು ಯಾವ ವಿಭಾಗದ ಪುಸ್ತಕ ಎಂದು ತೀರ್ಮಾನಿಸಲು ವಿಮರ್ಶಕರಿಗೆ ಸಾಧ್ಯವಾಗಲಿಲ್ಲ. ಆಗ ಶ್ರೀ ಕುವೆಂಪು ಅವರು ಇದು 'ಚಿತ್ರ ಕಾದಂಬರಿ' ಎಂದು ಕರೆದರು. ಕನ್ನಡದಲ್ಲಿ ಇದೊಂದು ಹೊಸವಿಭಾಗ ಆಗ ಪ್ರಾರಂಭವಾಯಿತು. ವಾಸ್ತವವಾಗಿ ಇದು ಸತ್ಯ ಘಟನೆಗಳ ಮೇಲೆ ರಚಿಸಿದ ಕಥನವಾಗಿದೆ. ಲೇಖಕರು ಶಾಲಾ ತನಿಖಾಧಿಕಾರಿಯಾಗಿದ್ದಾಗ ಕಂಡ, ಅನುಭವಿಸಿದ ಘಟನೆಗಳನ್ನೇ ಇಲ್ಲಿ ಆಕರ್ಷಕ ಶೈಲಿಯಲ್ಲಿ ನಿರೂಪಿಸಿದ್ದಾರೆ.

ಶಾಲೆಗಳಿಗೆ ಸರಿಯಾದ ಸರ್ಕಾರಿ ಕಟ್ಟಡಗಳು ಇರಲಿಲ್ಲ, ಖಾಸಗಿಯವರಿಂದ ಬಾಡಿಗೆ ಪಡೆದ ಕಟ್ಟಡಗಳೂ ವ್ಯವಸ್ಥಿತವಾಗಿರಲಿಲ್ಲ. ಯಾವ ಸೌಲಭ್ಯಗಳೂ ಸರಿಯಾಗಿ ಇಲ್ಲದ ಕಾಲ ಆಗಿತ್ತು. ಕೇವಲ ಹದಿನೈದು ರೂಪಾಯಿ ಸಂಬಳಕ್ಕೆ ದುಡಿಯುತ್ತಿದ್ದ ಶಿಕ್ಷಕರು, ಹೀಗೆ ತುಂಬ ಸಂಕಷ್ಟದ ಕಾಲದಲ್ಲಿ ವಿದ್ಯಾಭಿವೃದ್ಧಿ ನಡೆಯುತ್ತಿದ್ದ ಕಾಲವಾಗಿತ್ತು. ಇದರ ಕುರಿತು ಮುನ್ನುಡಿಯಲ್ಲಿ ಎಂ.ಆರ್.ಶ್ರೀನಿವಾಸ ಮೂರ್ತಿ ಯವರು ಹೀಗೆ ಬರೆಯುತ್ತಾರೆ. "ಉಪಾಧ್ಯಾಯರಿಗೆ ಹದಿನೈದು ರೂಪಾಯಿ ಸಂಬಳ, ಇಷ್ಟೊಂದು ಸಂಬಳ ಇದ್ದರೂ ಆರ್ಥಿಕ ಮುಗ್ಗಟ್ಟು ಇರುವುದರಿಂದ ಅವರ ಕಷ್ಟ ನಿವಾರಣೆಯಾಗಿಲ್ಲ. ಅವರ ಸಂಸಾರ ನಿರ್ವಹಣೆ ಸುಲಭವಾಗಿಲ್ಲ. ಹಿಂದೆ ಇದ್ದಂತೆ ರೂಪಾಯಿಗೆ ಹದಿನಾರು ಇಪ್ಪತ್ತು ಸೇರು ರಾಗಿ, ರೂಪಾಯಿಗೆ ಆರು ಏಳು ಸೇರು ಅಕ್ಕಿ ದೊರೆಯುವಂತಾಗಿ, ತುಟ್ಟೀ ಭತ್ಯವೂ ಸೇರಿದ ಈಗಿನ ಹೆಚ್ಚಿನ ಸಂಬಳಗಳೇ ಮುಂದಕ್ಕೂ ಉಪಾಧ್ಯಾಯರಿಗೆ ನಿಗದಿಯಾಗಿ, ಸ್ಥಿತಿ ಸುಧಾರಿಸಿದರೆ ಆ ಬಡ ಉಪಾಧ್ಯಾಯರು ಸಂತೋಷದಿಂದ ತಮ್ಮ ಕರ್ತವ್ಯವನ್ನು ನೆರವೇರಿಸಿಯಾರು. ಸುಖವಾಗಿ ಸಂಸಾರವನ್ನು ನಡೆಸಿಯಾರು. ಆದರೆ ಆ ರಾಮ ರಾಜ್ಯ ಯಾವಾಗ ಬರುವುದೋ ಗೊತ್ತಿಲ್ಲ".




ಬಿ.ಎಂ.ರಾಜಶೇಖರ, ಶಿಕ್ಷಕರು
M:9900705323
Scan For Digital Colourful
HAMPI TIMES E-paper

ಇಲ್ಲಿರುವ ಮೂವತ್ತು ಕಥೆಗಳೂ ಬೋಧಪ್ರದವಾಗಿವೆ. ಉಪಾಧ್ಯಾಯರ ಸಮಸ್ಯೆ, ಪೋಷಕರ ಸಮಸ್ಯೆ, ಮಕ್ಕಳ ಕಷ್ಟ, ಊರುಗಳಲ್ಲಿನ ಹಿರಿಯರ ಸಹಕಾರ-ಅಸಹಕಾರ ಹೀಗೆ ಅನೇಕ ವಿಷಯಗಳ ಕುರಿತು ಚಿಕಿತ್ಸಕ ದೃಷ್ಟಿಕೋನದಿಂದ ನೋಡಿದ್ದಾರೆ. ಇವರು ಶಾಲಾ ತನಿಖಾಧಿಕಾರಿಯಾಗಿಯೇ ನಿರೂಪಕನ ಪಾತ್ರವನ್ನೂ ನಿಭಾಯಿಸಿದ್ದಾರೆ. ಹಾಗಾಗಿ ಒಳ್ಳೆಯ ಉಪಾಧ್ಯಾಯರನ್ನು ಮೆಚ್ಚಿಕೊಂಡು ಪ್ರೋತ್ಸಾಹಿಸಿದ್ದಾರೆ. ಸ್ವಲ್ಪ ಆಚೆ-ಈಚೆ ಇರುವ ಶಿಕ್ಷಕರನ್ನು ಸರಿದಾರಿಯಲ್ಲಿ ನಡೆಯುವಂತೆ ತಿದ್ದಿದ್ದಾರೆ. ಹಳ್ಳಿಯ ಜನರ ಸಹಕಾರ ಪಡೆಯುವುದರ ಬಗೆಯನ್ನು ವಿವರಿಸಿದ್ದಾರೆ. ಎಲ್ಲಕ್ಕಿಂತ ಆ ಕಾಲದ ಸಾಮಾಜಿಕ ಬದುಕನ್ನೂ, ರಾಜಕೀಯ ವ್ಯವಸ್ಥೆಯನ್ನೂ, ಶಿಕ್ಷಣ ಇಲಾಖೆಯನ್ನೂ ಸೂಕ್ಷ್ಮವಾಗಿ ಅವಲೋಕಿಸಿ ಅದೆಲ್ಲದಕ್ಕೂ ಕನ್ನಡಿ ಹಿಡಿದಿದ್ದಾರೆ. ನಮ್ಮನ್ನು ಆ ಲೋಕಕ್ಕೆ ಕರೆದೊಯ್ಯುತ್ತಾರೆ.

ಮೇಷ್ಟ್ರು ವೆಂಕಟ ಸುಬ್ಬಯ್ಯ, ರಂಗನಾಥಪುರದಲ್ಲಿ ಸಭೆ, ರಂಗನಾಥಪುರದ ಗಂಗೇಗೌಡರು, ಗರುಡನ ಹಳ್ಳಿ ಮತ್ತು ಹನುಮನಹಳ್ಳಿ, ಬೋರ್ಡು ಒರೆಸುವ ಬಟ್ಟೆ ಇತ್ಯಾದಿಗಳು ಅಪರೂಪದ ಬರಹಗಳು. 'ಪರಾಶಕ್ತಿಯ ದರ್ಶನ' ವಂತೂ ಎಲ್ಲರ ಕಣ್ಣು ತೆರೆಸುವ ಬರೆಹ. ಮಹಿಳೆಯರ ಅಭಿಪ್ರಾಯಗಳನ್ನು ಗೌರವದಿಂದ ಆಲಿಸುವ ಹಾಗೂ ಅವರಿಗೆ ಗೌರವ ನೀಡುವ ಬಗೆಯನ್ನು ಇದು ತೋರಿಸುತ್ತದೆ.

ರಂಗಣ್ಣನ ಕನಸಿನ ದಿನಗಳು ಎನ್ನುವ ಈ ಕೃತಿಯನ್ನು ಎಲ್ಲರೂ, ಅದರಲ್ಲೂ ಶಿಕ್ಷಕರಾದವರು ಓದಲೇಬೇಕಾದ ಪುಸ್ತಕವಾಗಿದೆ. ಕಳೆದ ಎಪ್ಪತ್ತು ವರ್ಷಗಳಲ್ಲಿ ಇದರ ಐದು ಸಾವಿರ ಪ್ರತಿಗಳು ಮಾರಾಟವಾಗಿವೆ ಎಂದರೆ ಅದು ಈ ಕೃತಿಯ ಸತ್ವವನ್ನೂ, ಜನಪ್ರಿಯತೆಯನ್ನೂ ತೋರಿಸುತ್ತದೆ. ಪುಸ್ತಕೋದ್ಯಮದ ಅರಿವಿರುವವರಿಗೆ ಇದರ ಮಹತ್ವ ತಿಳಿಯುತ್ತದೆ. ಇದು ಕೃತಿಯೊಂದರ ಮಹತ್ವದ ಸಾಧನೆ. ಎಂ.ಆರ್.ಶ್ರೀನಿವಾಸಮೂರ್ತಿಯವರ ಸೊಗಸಾದ ಭಾಷೆ, ಲವಲವಿಕೆಯ ಸಂಭಾಷಣೆ, ಮನಸೆಳೆಯುವ ನಿರೂಪಣಾ ಶೈಲಿ ಒಳ್ಳೆಯ ಕಥನ ಕ್ರಮ, ನವಿರಾದ ಹಾಸ್ಯ ಇವೆಲ್ಲವುಗಳಿಂದಾಗಿ ಈ ಕೃತಿ ಸೊಗಸಾಗಿ ಓದಿಸಿಕೊಂಡು ಹೋಗುತ್ತದೆ. ಇದರಲ್ಲಿ ಎಲ್ಲಿಯೂ ನೇರವಾದ ಉಪದೇಶಗಳಿಲ್ಲ, ಎಲ್ಲೂ ಬೇಸರ ತರಿಸುವುದಿಲ್ಲ. ಸ್ವಲ್ಪ ಎಚ್ಚರ ತಪ್ಪಿದ್ದರೆ ಇದು ಒಣವೇದಾಂತವೋ, ತತ್ವಶಾಸ್ತ್ರದ ಪುಸ್ತಕವೋ ಆಗಿಬಿಡುತ್ತಿತ್ತು. ಆದರೆ ಲೇಖಕರ ಅಪಾರವಾದ ಓದಿನ ಅನುಭವ, ಕಲಾಸಿದ್ಧಿ ಈ ಅಪಾಯವನ್ನು ತಪ್ಪಿಸಿದೆ. ಒಳ್ಳೆಯ ಲಲಿತ ಪ್ರಬಂಧಗಳ ಧಾಟಿಯಲ್ಲಿ ಇದನ್ನು ನಿರೂಪಿಸಿರುವುದು ಇವರ ಜಾಣ್ಮೆಯನ್ನು ತೋರಿಸುತ್ತದೆ.

ಈ ಎಲ್ಲವನ್ನೂ ಓದಿದ ನಂತರ ಇಂದಿನ ಶಿಕ್ಷಣ ವ್ಯವಸ್ಥೆಯನ್ನು ನಾವು ಆ ದಿನಗಳಿಗೆ ಹೋಲಿಸಿ, ಬದಲಾಗಿರುವ ಗುಣಾತ್ಮಕ ಬೆಳವಣಿಗೆಗಳನ್ನು ಗಮನಿಸಬೇಕಾಗುತ್ತದೆ. ಸ್ವಾತಂತ್ರ್ಯ ಪೂರ್ವದ ಆ ದಿನಗಳಿಗಿಂತ ಇಂದು ಸಾಕಷ್ಟು ಸುಧಾರಣೆ ಆಗಿದೆ. ಸಾವಿರಾರು ಕೋಟಿ ಹಣವನ್ನು ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಖರ್ಚು ಮಾಡುತ್ತಿದ್ದಾರೆ. ಸಾಕಷ್ಟು ಭೌತಿಕ ಸೌಲಭ್ಯಗಳು ದೊರೆತಿವೆ, ದೊರೆಯುತ್ತಿವೆ. ವಿದ್ಯಾರ್ಥಿಗಳಿಗೆ ಸಾಕಷ್ಟು ಸೌಲಭ್ಯಗಳು ದೊರೆತಿವೆ. ಪೋಷಕರಿಗೂ ಬೇಕಾದಷ್ಟು ಅನುಕೂಲ ಆಗಿದೆ. ಪಠ್ಯಪುಸ್ತಕ ಹಾಗೂ ಬೋಧನಾ ವಿಧಾನಗಳಲ್ಲೂ ಗುಣಾತ್ಮಕ ಬದಲಾವಣೆಗಳು ಕಂಡು ಬಂದಿವೆ. ಈ ಎಲ್ಲದರಿಂದಾಗಿ ದೇಶದ ಸಾಕ್ಷರತೆಯ ಪ್ರಮಾಣದಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ವಿದ್ಯಾವಂತ ಸಮಾಜವು ದೇಶದ ಬೆನ್ನೆಲುಬಾಗಿರುತ್ತದೆ. ನಾಡಿನ ಅಭಿವೃದ್ಧಿಯಲ್ಲಿ ಇದರ ಪಾತ್ರ ಪ್ರಮುಖವಾಗಿರುತ್ತದೆ. ಆದರೆ ನೂರು ವರ್ಷಗಳ ಹಿಂದೆ ಯಾವುದೇ ಹೆಚ್ಚಿನ ಸೌಲಭ್ಯಗಳಿಲ್ಲದ ಕಾಲದಲ್ಲಿ ವಿದ್ಯೆಯನ್ನು ನೀಡಿದ ಆ ಕಾಲದ ಶಿಕ್ಷಕರನ್ನೂ, ಇಲಾಖೆಯನ್ನೂ ನಾವು ಕೃತಜ್ಞತೆಯಿಂದ ನೆನೆಯ ಬೇಕಾಗುತ್ತದೆ. ಆ ಕಾಲಘಟ್ಟವನ್ನು ಹಿಡಿದಿಟ್ಟು ನಮಗೆ ಕಟ್ಟಿಕೊಟ್ಟ ಶ್ರೀನಿವಾಸ ಮೂರ್ತಿಯವರನ್ನು ನಾವು ಇಂದು ಕೃತಜ್ಞತೆಯಿಂದ ಸ್ಮರಿಸಬೇಕಾಗುತ್ತದೆ. ಕನ್ನಡಕ್ಕೆ ಇಂತಹ ಅಪರೂಪಕ 'ಚಿತ್ರ ಕಾದಂಬರಿ'ಯನ್ನು ರಚಿಸಿ ನಮಗೆ ಮಹದುಪಕಾರವನ್ನು ಮಾಡಿದ್ದಾರೆ.




**ಲೇಖಕರು: ಎಂ.ಆರ್. ಶ್ರೀನಿವಾಸ ಮೂರ್ತಿ,**
**ಮೊದಲ ಮುದ್ರಣ : 1949, ಎಂಟನೆಯ ಮುದ್ರಣ : 2012**

# ಹೆಂಡತಿ ಎಂದರೆ ಹೇಗಿರಬೇಕು?

ಕಾರ್ಯೇಶು ದಾಸಿ, ಕರಣೇಶು ಮಂತ್ರಿ, ಭೋಜ್ಯೇಶು ಮಾತಾ, ರೂಪೇಶು ಲಕ್ಷ್ಮಿ, ಶಯನೇಷು ರಂಭಾ, ಕ್ಷಮಯಾಧರಿತ್ರಿ ಎಂಬ ಆರು ಗುಣಲಕ್ಷಣಗಳನ್ನು ಮಹಿಳೆಗೆ ನೀಡಿದ್ದು ಆಕೆ ಹೀಗೆಯೇ ಇರಬೇಕು ಎಂದು ಈ ಸಮಾಜ ಮತ್ತು ನಮ್ಮ ಸಂಸ್ಕೃತಿ ಹೇಳುತ್ತದೆ.

ಪ್ರತಿಯೊಬ್ಬ ವಿವಾಹಿತ ಸ್ತ್ರೀಯಿಂದ ಕೆಳಕಂಡ ವಿಷಯಗಳಲ್ಲಿ ನಿರೀಕ್ಷೆಯನ್ನು ಮಾಡಲಾಗುತ್ತದೆ. ಮದುವೆಯಾಗಿ ಗಂಡನ ಮನೆಗೆ ಬರುವ ಹೆಣ್ಣು ಮಗಳು ತನ್ನ ಅತ್ತೆ ಮಾವನ ಊಟೋಪಚಾರ ಮತ್ತು ಆರೋಗ್ಯದ ಕಾಳಜಿಯನ್ನು ಮಾಡುತ್ತಾಳೆ. ಮನೆಗೆ ಬರುವ ಅತಿಥಿಗಳ ಆದರದಿಂದ ಸ್ವಾಗತಿಸಿ ಅವರ ತಿಂಡಿ ತೀರ್ಥದ ವ್ಯವಸ್ಥೆ ಮಾಡುತ್ತಾಳೆ. ಗಂಡನ ಎಲ್ಲಾ ಕಷ್ಟ ಸುಖಗಳಿಗೆ ಹೆಗಲು ನೀಡುವ ಹೆಂಡತಿ ಮಕ್ಕಳ ಆರೋಗ್ಯ, ಊಟ, ತಿಂಡಿ ಮತ್ತು ಶಿಕ್ಷಣದ ಕುರಿತ ಜವಾಬ್ದಾರಿಯನ್ನು ಕೂಡ ಹೊರುತ್ತಾಳೆ. ಇದು ಈ ಸಮಾಜ ಹೆಣ್ಣು ಮಕ್ಕಳಿಗೆ ನೀಡಿರುವ ಗುರುತರ ಜವಾಬ್ದಾರಿಯಾಗಿದೆ.

ಆದರೆ ಪತ್ನಿಯಾಗಿ ಆಕೆಯ ಜವಾಬ್ದಾರಿ ಮತ್ತಷ್ಟು ಹೆಚ್ಚಾಗಿರುತ್ತದೆ. ಎಷ್ಟೋ ಬಾರಿ ಕುಟುಂಬದ ಉಳಿದೆಲ್ಲ ವಿಷಯಗಳನ್ನು ನಿಭಾಯಿಸುವ ಹೆಣ್ಣುಮಗಳು ಒಳ್ಳೆಯ ಪತ್ನಿಯಾಗುವಲ್ಲಿ ಸೋಲಲು ಕಾರಣ ಆಕೆಗೆ ಕೆಲ ವಿಷಯಗಳ ಅರಿವು ಉಂಟಾಗದೆ ಹೋಗುವುದು.

ಓರ್ವ ಒಳ್ಳೆಯ ಪತ್ನಿಯಾಗುವ ನಿಟ್ಟಿನಲ್ಲಿ ಹೆಣ್ಣು ಮಕ್ಕಳು ಈ ಕೆಳಗಿನ ವಿಷಯಗಳಲ್ಲಿ ಪರಿಣತಿಯನ್ನು ಸಾಧಿಸಲೇಬೇಕು.

ಅವುಗಳಲ್ಲಿ ಮೊಟ್ಟ ಮೊದಲನೆಯದಾಗಿ.... ತನ್ನ ಪತಿ ಆಡುವ ಮಾತುಗಳನ್ನು ಸ್ಪಷ್ಟವಾಗಿ ಆಲಿಸುವ ಮೂಲಕ ಒಳ್ಳೆಯ ಕೇಳುಗಳಾಗಿರಬೇಕು. ಜೊತೆಗೆ ತಾನು ಕೂಡ ಉತ್ತಮ ಮತ್ತು ಮುಕ್ತ ಸಂವಹನ ಕಾರ್ತಿಯಾಗಿರಬೇಕು. ವಿಷಯವನ್ನು ಸ್ಪಷ್ಟವಾಗಿ ಹೇಳಲೇಬೇಕು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ
Scan For Digital Colourful
HAMPI TIMES E-paper

ಪತ್ನಿಯಾಗಿ ಬರುವ ಯುವತಿ ಭಾವನಾತ್ಮಕ ಜಾಣ್ಮೆಯನ್ನು ಹೊಂದಿದ್ದು ತನ್ನ ಭಾವನೆಗಳನ್ನು ಉತ್ತಮವಾಗಿ ನಿರ್ವಹಿಸುವ ಜಾಣ್ಮೆ ಆಕೆಯಲ್ಲಿದ್ದು ಆ ಮೂಲಕ ತನ್ನ ಪತಿ ಮತ್ತು ತನ್ನ ನಡುವೆ ಉಂಟಾಗುವ ಸಂಘರ್ಷಗಳನ್ನು ಆರೋಗ್ಯಕರವಾಗಿ ಮತ್ತು ರಚನಾತ್ಮಕವಾಗಿ ಬಗೆಹರಿಸುವ ಜಾಣತನ ಆಕೆಯಲ್ಲಿ ಇರಬೇಕು.

ಪತಿಗೆ ಉತ್ತಮ ಸಹಕಾರ ಮತ್ತು ಸಹಾಯವನ್ನು ನೀಡುವಂತಹ ಪತ್ನಿ ಆಗಿರಬೇಕು. ಗಂಡನ ಕನಸು, ಗುರಿ ಮತ್ತು ಆಕಾಂಕ್ಷೆಗಳಿಗೆ ಆಕೆ ಪ್ರೋತ್ಸಾಹ ನೀಡಬೇಕು. ಆತನ ಚಿಕ್ಕ ಪುಟ್ಟ ಯಶಸ್ಸುಗಳನ್ನು ಸಂಭ್ರಮಿಸಬೇಕು. ಪರಸ್ಪರ ಒಬ್ಬರಿಗೊಬ್ಬರು ಊರುಗೋಲಾಗಿ ಬದುಕಿನ ಪಯಣದಲ್ಲಿ ಸಾಗಬೇಕು.

ಪತಿ ಪತ್ನಿಯರಲ್ಲಿ ಗೌರವ ಮತ್ತು ನಂಬಿಕೆ ಇರಬೇಕು. ಸಂಗಾತಿಯ ಭಾವನೆಗಳು, ಅಭಿಪ್ರಾಯಗಳು ಮತ್ತು ಮಿತಿಗಳನ್ನು ಅರಿತಿರಬೇಕು. ತನ್ನ ಮಾತುಕತೆ ಮತ್ತು ಕ್ರಿಯೆಗಳ ಮೂಲಕ ತನ್ನ ಪತಿಯೊಂದಿಗೆ ಉತ್ತಮ ಸಂಬಂಧವನ್ನು ನಿರ್ಮಿಸಿಕೊಳ್ಳಬೇಕು.

ತನ್ನ ಪತಿಯೊಂದಿಗೆ ಉತ್ತಮ ಜೊತೆಗಾರಿಕೆಯನ್ನು ಹೊಂದಿದ್ದು ಜವಾಬ್ದಾರಿಗಳನ್ನು ಪರಸ್ಪರ ಹಂಚಿಕೊಂಡು ನಿರ್ವಹಿಸಬೇಕು. ಕೌಟುಂಬಿಕ ಗುರಿಗಳನ್ನು ಹೊಂದಿ ಅವುಗಳನ್ನು ನಿರ್ವಹಿಸುವಲ್ಲಿ ಜೊತೆಯಾಗಿರಬೇಕು


ಆತ್ಮೀಯತೆ ಮತ್ತು ಪ್ರೀತಿಯ ಭಾವ ದಾಂಪತ್ಯದಲ್ಲಿ ಬೆಚ್ಚನೆಯ ಅನುಭವವನ್ನು ನೀಡುತ್ತದೆ. ಪತಿಯೊಂದಿಗೆ ಉತ್ತಮ ಗುಣಮಟ್ಟದ ಸಮಯ ನಿರ್ವಹಣೆಯನ್ನು ಮಾಡಬೇಕು. ಜಾಣ ಮತ್ತು ಆಕರ್ಷಕ ಪತ್ನಿ ಪ್ರೀತಿ ಮತ್ತು ಅನ್ಯೋನ್ಯ ಭಾವದಿಂದ ಗಂಡನ ಮನಸ್ಸನ್ನು ಗೆಲ್ಲಬೇಕು.

ತನ್ನ ವೈಯುಕ್ತಿಕ ಬೆಳವಣಿಗೆಯತ್ತ ಗಮನಹರಿಸುವ ನಿಟ್ಟಿನಲ್ಲಿ ತನಗೆ ಇಷ್ಟವಾದ ಹವ್ಯಾಸಗಳಲ್ಲಿ, ಹೊಸ ವಿಷಯಗಳ ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ತನ್ನದೇ ಆದ ಗುರಿಗಳನ್ನು ಹೊಂದಿ ಅವುಗಳನ್ನು ಈಡೇರಿಸಿಕೊಳ್ಳಬೇಕು.

ಕೃತಜ್ಞತೆ ಮತ್ತು ಕ್ಷಮಾ ಗುಣವನ್ನು ರೂಡಿಸಿಕೊಂಡಿರಬೇಕು. ಗಂಡನ ಮತ್ತು ಕುಟುಂಬದವರ ಸ್ವಭಾವವನ್ನು ಅರಿಯಬೇಕು. ಯಾವುದೇ ರೀತಿಯ ತೊಂದರೆ, ಅಸಮಾಧಾನ ಮತ್ತು ಕಿರಿಕಿರಿಗಳು ಮನೆಯಲ್ಲಿ ಉಂಟಾದಾಗ ತನ್ನ ಸಂಗಾತಿಯ ದೃಷ್ಟಿಕೋನವನ್ನು ಅರ್ಥೈಸಿಕೊಳ್ಳಬೇಕು

ತನ್ನ ಎಲ್ಲಾ ಕ್ರಿಯೆಗಳಿಗೆ ತಾನೇ ಜವಾಬ್ದಾರಿಯಾಗುವ ಗುಣವನ್ನು ಹೊಂದಿರಬೇಕು ಅವಶ್ಯಕತೆ ಇದ್ದಾಗ ತನ್ನ ಕ್ರಿಯೆಗಳಿಗೆ ಕ್ಷಮೆ ಕೇಳುವುದು ಕೂಡ ಆಕೆಗೆ ಗೊತ್ತಿರಬೇಕು. ತನ್ನ ಬದ್ಧತೆಗಳಿಗೆ ತಾನೇ ಹೊಣೆಗಾರಳಾಗಬೇಕು.

ಪತ್ನಿಯಾದವಳು ಕೃತಜ್ಞತೆ ಮತ್ತು ಹೊಗಳಿಕೆಯನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ತನ್ನ ಸಂಗಾತಿಯ ಕೃತಜ್ಞತೆಯನ್ನು ಅರ್ಪಿಸುವ ಮೂಲಕ ತಮ್ಮ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಿ ಕೊಳ್ಳಬೇಕು.



ಈ ರೀತಿಯ ಉತ್ತಮ ಗುಣಗಳನ್ನು ಪತ್ನಿಯ ಹೊಂದಿದ್ದರೆ ಆಕೆ ಖಂಡಿತವಾಗಿಯೂ ಒಳ್ಳೆಯ ಪತ್ನಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ನೀವು ಕೂಡ ಉತ್ತಮ ಪತ್ನಿ ಎಂದು ಕರೆಸಿಕೊಳ್ಳುವ ಆಸಕ್ತಿಯನ್ನು ಹೊಂದಿದ್ದರೆ ಖಂಡಿತವಾಗಿಯೂ ಈ ಸಲಹೆಗಳನ್ನು ಪಾಲಿಸಿ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಭಕ್ತರ ಬಾಂಧವ

ಬಾಲನ ಮೊರೆಯನು ಆಲಿಸಿ ಬಂದೆಯ
ಕಂಬದಿ ಮೂಡಿದ ನೃಸಿಂಹ
ನಿಶ್ಚಲ ಭಕ್ತಿಗೆ ಒಲಿಯುವ ದೇವನೆ
ನಮಿಸುವೆ ಚರಣದಿ ಪರಮಾತ್ಮ

ತನ್ನನು ತಾನೇ ದೇವನು ಎಂದನು
ಹಿರಣ್ಯಕಶಿಪುವು ಕಂದನಿಗೆ
ಹರಿಯನು ನೆನೆದರೆ ದಂಡಿಸಿ ಬಿಡುವೆನು
ಎಂದನು ಕ್ರೋಧದಿ ಬಾಲನಿಗೆ

ತಂದೆಯ ಮಾತನು ಒಲ್ಲದ ಪುತ್ರನು
ಹರಿಯನು ಭಜಿಸಿದ ಪ್ರಹ್ಲಾದ
ಲಕ್ಷ್ಮೀರಮಣನ ನೆನೆದರೆ ಅವನಿಗೆ
ತುಂಬುತ ಬರುವುದು ಆಹ್ಲಾದ

ಕೋಪದಿ ದಾನವ ಮಗನಲಿ ನುಡಿದನು
ತೋರಲು ಹೇಳಿದ ಹರಿಯನ್ನು
ಕಂಬದಿ ಮೂಡಿದ ನೃಸಿಂಹ ರೂಪದೆ
ಹಿರಣ್ಯಕಶಿಪುವ ವಧಿಸಿದನು

ಭಕ್ತಿಯ ಹೂಗಳ ಅರ್ಪಿಸಿ ಬೇಡಲು
ಬಾಳಲಿ ನೆಮ್ಮದಿ ತರುವವನು
ಭಕ್ತರ ಬಾಂಧವ ಜಗದೋದ್ಧಾರಕ
ಶಿಷ್ಟರ ಅನುದಿನ ಪೊರೆಯುವನು॥


– ಪೆರ್ಮುಖ ಸುಬ್ರಹ್ಮಣ್ಯ ಭಟ್

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಬಡತನದಿಂದ ಹೊರಬರಲು ಶಿಕ್ಷಣವೇ ಆಯುಧ

## ಕೇವಲ ನೌಕರಿಗಷ್ಟೇ ಅಲ್ಲ ಸ್ವಾವಲಂಬಿ ಬದುಕಿಗೂ ಬೇಕಿದೆ ಶಿಕ್ಷಣ | ಯುವಕರ ಶೈಕ್ಷಣಿಕ ಹಿನ್ನೆಡೆಗೆ ಜಾಗೃತಿ ಕೊರತೆ





ಅಂದಿನ ದಿನಮಾನಗಳಲ್ಲಿ ಶಿಕ್ಷಣವನ್ನು ಸ್ವಲ್ಪವೇ ಪಡೆದರು ಕಲಿತಿರುವ ವ್ಯಕ್ತಿಗಳಿಗೆ ಜ್ಞಾನ ಸುಲಭವಾಗಿ ಬರುತ್ತಾ ಇತ್ತು.. ಆದ್ರೆ ಇಂದು ಎಲ್ಲಾ ಸೌಕರ್ಯಗಳೂ ಇದ್ದರೆ ಮೆಟ್ರಿಕ ಪೂರ್ವ ಮೆಟ್ರಿಕ ನಂತರ ಅಭ್ಯಾಸಿಸಿದರು ಸಹ ಅಷ್ಟಗಿ ಉತ್ತಮವಾದ ಜ್ಞಾನ ಸಿಗುತ್ತಿಲ್ಲ. ಸಮಾಜದಲ್ಲಿ ಇರುವ ಎಲ್ಲರನ್ನು ಶಿಕ್ಷಣ ದಿಂದ ವಂಚಿಸುವ ಪ್ರಯತ್ನ ನಡೀತಾ ಇದೆಯಾ ಎನ್ನೋ ಆತಂಕ ಮೂಡುತ್ತದೆ.

ಯುವಕರು ಶಿಕ್ಷಣದ ಮೇಲೆ ರೋಷಿ ಹೋಗಿದ್ದಾರೆ ಯಾಕೆಂದರೆ ಅವರಿಗೆ ಶಿಕ್ಷಣವನ್ನು ಏಕೆ? ಪಡೆಯಬೇಕು ಎಂಬ ಸಣ್ಣ ಅರಿವು ಸಹ ಇಲ್ಲ. ಹಾಗೆಯೇ ವಿದ್ಯಾಭ್ಯಾಸ ಕೇವಲ ನೌಕರಿ ಕೊಡುವ ಸಾಧನೆ ಎಂಬ ಮನಸ್ಥಿತಿ ಅವರಲ್ಲಿ ಬೇರೂರಿದೆ. ನಾವು ಕಲಿತಿರುವ ವಿದ್ಯಾಭ್ಯಾಸ ನಮಗೆ ಜೀವನವನ್ನು ನಡೆಸಲು ನೌಕರಿಯನ್ನು ಕೊಡದಿದ್ದರೆ ಶಿಕ್ಷಣ ಯಾಕೆ ಬೇಕು ಎನ್ನುವ ಆಲೋಚನೆಗಳು ಯುವಕರ ಮನದಾಳದಲ್ಲಿ ಸೇರಿವೆ. ಆದರೆ ಈ ಆಲೋಚನೆ ಅವರಿಗೆ ತಪ್ಪು ಎಂಬುವ ಹರಿವು ಸಹ ಇಲ್ಲ.

ಶಿಕ್ಷಣವನ್ನು ಪಡೆಯುವಾಗ ಅತಿಯಾದ ತಾಳ್ಮೆಯು ಸಹ ಇರಬೇಕಾಗುತ್ತದೆ. ಯುವಕರಿಗೆ ಮತ್ತು ಪಾಲಕರಿಗೆ ತಾಳ್ಮೆ ಇಲ್ಲದಂತಾಗಿದೆ. ಒಂದು ದಿನ ಕಾಲೇಜು ಅಥವಾ ಶಾಲೆಗೆ ಹೋಗಿ ಬಂದ ತಕ್ಷಣ ತನ್ನ ಮಗ/ಮಗಳಿಗೆ ನೌಕರಿ ತತಕ್ಷಣ ಸಿಕ್ಕ ಬಿಡಬೇಕು ಎಂಬ ಮನಸ್ಥಿತಿ ಪೋಷಕರಲ್ಲಿ ಮೂಡಿದೆ. ಆದುದರಿಂದ ಶಿಕ್ಷಣವೂ ಸಹ ಉದ್ಯಮದ ರೀತಿಯಲ್ಲಿ ಬದಲಾಗುತ್ತಿದೆ..

ಪೋಷಕರು ಮಕ್ಕಳಿಗೆ ತನ್ನ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸಿಕೊಂಡು ಹೋಗು ಎನ್ನುವ ಕಾರಣ ಯುವಕರನ್ನು ವಿದ್ಯಾಭ್ಯಾಸದಿಂದ ದೂರ ಸರಿಯಲು ಕಾರಣವಾಗಿದೆ. ಪ್ರತಿಯೊಬ್ಬರಿಗೂ ತನ್ನದೇ ಆದ ಗುರಿ. ಉದ್ದೇಶ. ಇರುತ್ತದೆ. ಅದನ್ನು ಪೋಷಕರು ಅರ್ಥೈಸಿಕೊಂಡು ಅದರ ಅನುಗುಣವಾಗಿ ವಿದ್ಯಾಭ್ಯಾಸಕ್ಕೆ ಬೆನ್ನು ತಟ್ಟಿ ಉರಿದುಂಬಿಸುವ ಕೆಲಸ ಮಾಡಬೇಕು ಹಾಗಾದಾಗ ಮಾತ್ರ ಮಧ್ಯಮ ವರ್ಗದವರು ಬಡವರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣವನ್ನು ಪಡೆಯಲಿಕ್ಕೆ ಸಾಧ್ಯವಾಗುತ್ತದೆ.

ಭೂಮಿ ಮೇಲೆ ಹುಟ್ಟಿದ ಪ್ರತಿಯೊಬ್ಬರಿಗೂ ಸಹ ಒಂದಲ್ಲ ಒಂದು ಸಮಸ್ಯೆ ಇರುತ್ತದೆ ಅದೇ ರೀತಿ ಬಡತನ ಸಹ ಒಂದು ಆ ಬಡತನದ ನೆಪವಡ್ಡಿ ಯುವಕರು ಶಿಕ್ಷಣದಿಂದ ಪಲಾಯನ ಗೈಯುವ ಆಲೋಚನೆಯನ್ನು ಬಿಟ್ಟು ಶಿಕ್ಷಣವನ್ನು ಪಡೆಯಲು ಮುಂದಾಗಬೇಕು. ಏಕೆಂದರೆ ಆ ಬಡತನದಿಂದ ಹೊರಬರಲು ಇರುವ ಏಕೈಕ ಆಯುಧ ಶಿಕ್ಷಣವೆಂದು ನಮ್ಮ ಸಾಧು. ಸಂತರು. ವಚನಕಾರರು. ಸಂವಿಧಾನ ರಚನಕಾರರು. ಹೇಳಿದ್ದಾರೆ.

ಡಾಕ್ಟರ್ ಬಿಆರ್ ಅಂಬೇಡ್ಕರ್ ಅವರು ಹೀಗೆನ್ನುತ್ತಾರೆ 'ಒಂದು ಹೊತ್ತು ಉಪವಾಸವಿದ್ದರೂ ಚಿಂತೆಯಲ್ಲ ನಿಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ಕೊಡಿಸಿ". ಎಂದು ಶಿಕ್ಷಣವೇ ನಮಗೆ ದುಡಿಮೆ ಎನ್ನುವ ಕಲ್ಪನೆ ಮೂಡಬೇಕು..

ಪ್ರತಿನಿತ್ಯ ಒಬ್ಬ ವ್ಯಕ್ತಿ ಹೇಗೆ ತನ್ನ ಸಂಸಾರದ ನೌಕೆಯನ್ನು ಸಾಗಿಸಲು ಅವಿರತ ಶ್ರಮದಿಂದ ದುಡಿಯುತ್ತಾನೆ. ಅದೇ ರೀತಿಯಲ್ಲಿ ಶಿಕ್ಷಣವನ್ನು ಸಹ ಒಂದು ದುಡಿಮೆ ರೀತಿಯಲ್ಲಿ ಪಡೆಯಬೇಕು.. ಈ ರೀತಿಯಲ್ಲಿ ಯೋಚಿಸಿದಾಗ ಮಾತ್ರ ಶ್ರಮಿಕ ಮಕ್ಕಳ ಬದುಕು ಬದಲಾವಣೆ ಆಗಲು ಸಾಧ್ಯ. ಶಿಕ್ಷಣದ ದುಡಿಮೆಯಿಂದ ಪ್ರತಿನಿತ್ಯ ಹಣ ಬರದೆ ಇದ್ದರು ಅದಕ್ಕಾಗಿ ಮೀಸಲಿಟ್ಟ ಸಮಯ ಖಂಡಿತ ಒಂದು ದಿನ ಯಶಸ್ಸನ್ನು ತಂದುಕೊಡುತ್ತದೆ...

ಈ ಒಂದು ಶಿಕ್ಷಣದಿಂದ ಕೇವಲ ನೌಕರಿ ಸಿಗುವುದಲ್ಲದೆ ಪರೋಕ್ಷವಾಗಿ ಸಹ ನಮ್ಮಲ್ಲಿ ಹಲವಾರು ಬದಲಾವಣೆಯನ್ನು ತರಲು ಮುಖ್ಯ ಮೆಟ್ಟಿಲಾಗಿದೆ. ವ್ಯಕ್ತಿತ್ವ ವಿಕಸನ ಮಾನವೀಯ ಗುಣಗಳು ಒಂದು ಕುಟುಂಬವನ್ನು ನಡೆಸಲು ಯೋಗ್ಯವಾದ ವ್ಯಕ್ತಿತ್ವವನ್ನು ರೂಪಿಸುವ ತಂತ್ರಗಾರಿಕೆ ಸಹ ಈ ಒಂದು ಶಿಕ್ಷಣದಲ್ಲಿ ಅಡಕವಾಗಿದೆ.

ಶಿಕ್ಷಣ ನಮಗೆ ಯಾಕೆ ಬೇಕು? ಶಿಕ್ಷಣದಿಂದ ಏನು ಪ್ರಯೋಜನ? ಆ ಶಿಕ್ಷಣವನ್ನು ಪಡೆದು ಯಾರು ಉದ್ಧಾರ ಆಗಿದ್ದಾರೆ? ಎನ್ನುವ ಮೂರ್ಖರು ತಿಳಿದುಕೊಳ್ಳಬೇಕು. ನಮ್ಮ ದೇಶಕ್ಕೆ ಸಂವಿಧಾನ ರಚಿಸಿದವರು ಸುಭದ್ರವಾದ ಭಾರತ. ಸುರಕ್ಷತೆಯ ಭಾರತವನ್ನು ನಿರ್ಮಿಸಲು ಬಾಬಾ ಸಾಹೇಬರಿಗೆ ಈ ಶಿಕ್ಷಣವೇ ಅಡಿಪಾಯ ಎಂಬ ಪ್ರಜ್ಞೆ, ಅರಿವು ಮೂಡಬೇಕು.

ಹಾಗೆಯೇ ಜಿಲ್ಲಾವಾರು ಆಡಳಿತ ನಡೆಸುವ ಜಿಲ್ಲಾಧಿಕಾರಿಗಳಿಗೆ ಸಹ ಈ ಶಿಕ್ಷಣವೇ ಆ ಹಂತಕ್ಕೆ ತಲುಪಿಸಿರುವ ಆಯುಧ ಎಂದು ಜನಸಾಮಾನ್ಯರು ತಿಳಿದುಕೊಳ್ಳಬೇಕು.

ದೇಶದ ಅಭಿವೃದ್ಧಿ ಇರುವುದೇ ಜನಗಳ ಅಭಿವೃದ್ಧಿಯಲ್ಲಿ ನಾವುಗಳು ಉತ್ತಮವಾದ ಶಿಕ್ಷಣವನ್ನು ಪಡೆದು ಕೊಂಡು ಒಂದು ಹಂತಕ್ಕೆ ತಲುಪಿದರೆ ಅದು ಸಹ ದೇಶದ ಅಭಿವೃದ್ಧಿಗೆ ಪೂರಕ.

"ದೇಶ/ ರಾಷ್ಟ್ರ ನಮಗೆ ಏನು ಮಾಡಿದೆ ಎಂಬುದಕ್ಕಿಂತ ರಾಷ್ಟ್ರಕ್ಕೆ ನಾವು ಏನು ಕೊಡುತ್ತಿದ್ದೇವೆ ಎನ್ನುವುದು ಮುಖ್ಯ". ಈ ದೇಶಕ್ಕೆ ನಾವುಗಳು ಜೀವ ಕೊಡಬೇಕಾದ ಅವಶ್ಯಕತೆ ಇಲ್ಲ ನಮ್ಮ ಬದುಕನ್ನು ಉನ್ನತ ಸ್ಥಾನದಲ್ಲಿ ಕಟ್ಟಿಕೊಂಡರೆ ಅದು ಸಹ ನಾವು ದೇಶಕ್ಕೆ ಕೊಡುವ ಸಣ್ಣ ಕಾಣಿಕೆ ಎನ್ನಬಹುದು. ಯಾಕೆಂದರೆ ಜನಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ.

ಹೊಲಕ್ಕೆ ಬಿತ್ತಿದ ಪಸಲು ಸಹ ಅದು ಬೆಳೆದು ರೈತನ ಕೈ ತಲುಪಲು ತನ್ನದೇ ಸಮಯವನ್ನು ತೆಗೆದುಕೊಳುತ್ತದೆ. ಅದೇ ರೀತಿಯಲ್ಲಿ ಸಹ ಒಂದು ಯಶಸ್ಸು ಸಹ ತನ್ನದೇ ಸಮಯವನ್ನು ಮೀಸಲಿರಿಸಲು ಬಯಸುತ್ತದೆ. SSLC., PUC,,B.A ಗಳು ಸಹ ಉನ್ನತ ಯಶಸ್ಸನ್ನು ಪಡೆಯಲು ಇರುವ ಮೆಟ್ಟಿಲುಗಳು ಅವುಗಳನ್ನು ದಾಟಿಕೊಂಡೆ ತಮ್ಮ ಗುರಿಗಳನ್ನು ತಲುಪಲಿಕ್ಕೆ ಸಾಧ್ಯ..


ಪೋಷಕರು ತಮ್ಮ ಮಕ್ಕಳ ಗುರಿಯನ್ನು ತಿಳಿದುಕೊಂಡು ಅದರ ಆಳ, ವ್ಯಾಪ್ತಿಯನ್ನು ಅರ್ಥೈಸಿಕೊಂಡು ಮಕ್ಕಳ ಗುರಿಗಳಿಗೆ ಸಹಕಾರ ನೀಡಬೇಕು ಏಕೆಂದರೆ ಗುರಿಯನ್ನು ಹೊತ್ತಿರುವ ಮಗ/ಮಗಳಿಗೆ. ತನ್ನ ಕುಟುಂಬದ ಬೆಂಬಲ ಅತಿ ಅವಶ್ಯಕವಾಗಿರುತ್ತದೆ..

– **ಸೋಮಪ್ಪ ಪೂಜಾರ**
ಪತ್ರಿಕೋದ್ಯಮದ ವಿಭಾಗದ ವಿದ್ಯಾರ್ಥಿ.ಕೊಪ್ಪಳ ವಿವಿ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ನಂ. 1 ಜಿಲ್ಲಾಮಟ್ಟದ ದಿನಪತ್ರಿಕೆ
HAMPI TIMES
Kannada Daily
GROW YOUR BUSINESS with US
Local Reach, Real Impact
Trusted Brand
Affordable & Flexible Options
Print & Digital Visibility

• New Store Openings
• Seasonal Offer
• Events & Festivals
• Service Promotions Etc...
Our Website
www.hampitimes.com/
epaper.hampitimes.com
Email: hampitimes@gmail.com
Contact For Advertisements
94486 33038

Grow Your Business With Us
S.M.Traders & Services
Authorised Distributor for ATLAS COPCO Portable Screw Air Compressors
for North Karnataka
Water Well and Non Water Well Applications
web: www.smtradersandservices.com
M: 9686663125 - 9686663132
Atlas Copco
Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka



## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 08-05-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1585.30 ಅಡಿ |
| ಒಳ ಹರಿವು | 3169 ಕ್ಯುಸೆಕ್ |
| ಹೊರ ಹರಿವು | 280 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.525 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1577.74 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 138 ಕ್ಯುಸೆಕ್ |
| ಸಾಮರ್ಥ್ಯ | 3.470 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

09-05-2025 – ಶುಕ್ರವಾರ

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಹಸ್ತ |
| ಯೋಗ | : ವಜ್ರ |
| ಕರಣ | : ಬಾಳವ |
| ಸೂರ್ಯೋದಯ | : 05:50:02 |
| ಸೂರ್ಯಾಸ್ತ | : 18:57:00 |
| ರಾಹು ಕಾಲ | : 10:45-12:24 |
| ಯಮಘಂಡ ಕಾಲ | : 15:40-17:19 |
| ಗುಳಿಕ ಕಾಲ | : 07:28-09:07 |

## ವೈದ್ಯರು ಚಿಕಿತ್ಸೆ ನೀಡಿ

ಮೊದಲ ಪುಟದಿಂದ

ಆಕಸ್ಮಿಕ ಘಟನೆಗಳಲ್ಲಿ ಗರ್ಭಿಣಿಯರ ಆರೈಕೆಗೆ ಯಾರು ಇಲ್ಲದಿದ್ದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಮಾಹಿತಿ ತಿಳಿಸಿ ಆರೈಕೆ ಕೇಂದ್ರಕ್ಕೆ ಕಳುಹಿಸಬೇಕು. ಸಕಾಲದಲ್ಲಿ ಆಗಬೇಕಾದ ತಪಾಸಣೆಗೆ ಅಡಚಣೆಯಾಗದಂತೆ ಪಾಲಕರ ಮನವೊಲಿಸಲು ಮೊದಲ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಸಿದ್ದಮ್ಮನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ದಿವ್ಯಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಸಮುದಾಯ ಆರೋಗ್ಯ ಅಧಿಕಾರಿ ಯರ್ರಿಸ್ವಾಮಿ, ಆರೋಗ್ಯ ನಿರೀಕ್ಷಣಾಧಿಕಾರಿ ಶ್ವೇತಾ, ಇತರರು ಉಪಸ್ಥಿತರಿದ್ದರು.

## ಗ್ರಾಪಂ ತೆರವಾದ ಸ್ಥಾನ ಉಪ ಚುನಾವಣಾ ವೇಳಾ ಪಟ್ಟಿ ಪ್ರಕಟ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಜಿಲ್ಲೆಯ ವಿವಿಧ ತಾಲ್ಲೂಕುಗಳ ಗ್ರಾಮ ಪಂಚಾಯಿತಿಯಲ್ಲಿ ವಿವಿಧ ಕಾರಣಗಳಿಂದ ತೆರವಾದ ಸ್ಥಾನಗಳಿಗೆ ಉಪ ಚುನಾವಣೆ ನಡೆಸಲು ಚುನಾವಣಾ ವೇಳಾಪಟ್ಟಿ ಪ್ರಕಟಿಸಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ನಾಮಪತ್ರಗಳನ್ನು ಸಲ್ಲಿಸಲು ಮೇ 14 ರಂದು ಕೊನೆಯ ದಿನವಾಗಿರುತ್ತದೆ. ಮೇ 15 ರಂದು ನಾಮಪತ್ರಗಳನ್ನುಪರಿಶೀಲನೆ. ಉಮೇದುವಾರಿಕೆಯನ್ನು ಹಿಂತೆಗೆದು ಕೊಳ್ಳಲು ಮೇ 17 ಕೊನೆಯ ದಿನ. ಮತದಾನವು ಮೇ 25 ರಂದು ನಡೆಯಲಿದೆ. ಮೇ 28 ರಂದು ಉಪಚುನಾವಣೆ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ.

**ಖಾಲಿ ಇರುವ ಗ್ರಾಪಂ ವಿವರ ಮತ್ತು ಸ್ಥಾನ:** ಕಂಪ್ಲಿ ತಾಲ್ಲೂಕಿನ ದೇವಸಮುದ್ರ-1(ಸಾಮಾನ್ಯ ಮಹಿಳೆ), ದೇವಲಾಪುರ-1(ಸಾಮಾನ್ಯ). ಸಿರುಗುಪ್ಪ ತಾಲ್ಲೂಕಿನ ರಾವಿಹಾಳು-1 (ಅನುಸೂಚಿತ ಪಂಗಡ ಮಹಿಳೆ) ಬಿ.ಎಂ.ಸೂಗೂರು-2 (ಸಾಮಾನ್ಯ ಮತ್ತು ಸಾಮಾನ್ಯ ಮಹಿಳೆ) ಮತ್ತು ಸಂಡೂರು ತಾಲ್ಲೂಕಿನ ಮೆಟ್ರಿಕಿ-1(ಅನುಸೂಚಿತ ಪಂಗಡ ಮಹಿಳೆ) ಸೇರಿ ಒಟ್ಟು 6 ಗ್ರಾಮಪಂಚಾಯತಿಗಳಿಗೆ ಉಪ ಚುನಾವಣೆ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಅವರು ತಿಳಿಸಿದ್ದಾರೆ.

# ವಾರದೊಳಗೆ ಪ್ರಗತಿ ಮಾಹಿತಿ ಒದಗಿಸಿ ಇಂದಿರಾ ಕ್ಯಾಂಟೀನ್‌ಗಳನ್ನ ಶೀಘ್ರ ಪೂರ್ಣಗೊಳಿಸಿ

### ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಅಧಿಕಾರಿಗಳಿಗೆ ಸೂಚನೆ । ಮೇ 21-22 ಸಿಎಂ ನೇತೃತ್ವದಲ್ಲಿ ರಾಜ್ಯಮಟ್ಟದ ಪ್ರಗತಿ ಪರಿಶೀಲನಾ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ಮೇ 21, 22 ರಂದು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ರಾಜ್ಯದ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಯಲಿದ್ದು, ಇಲ್ಲಿಯವರೆಗೆ ಜಿಲ್ಲೆಯಲ್ಲಿ ವಿವಿಧ ಇಲಾಖೆಗಳಿಂದ ನಾನಾ ಯೋಜನೆಗಳಡಿ ಸಾಧಿಸಲಾದ ಪ್ರಗತಿಯ ಪೂರಕ ಮಾಹಿತಿಯನ್ನು ಒದಗಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮುಖ್ಯಮಂತ್ರಿಗಳು ಇದೇ ಮೇ 21 ಹಾಗೂ 22 ರಂದು ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು ಹಾಗೂ ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿರಿಗಳೊಂದಿಗೆ ಸಭೆ ನಡೆಸಲಿದ್ದು, ಈ ಕುರಿತು ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ನೋಡಿಕೊಳ್ಳಬೇಕು. ಸರಬರಾಜಾಗುವ ಕುಡಿಯುವ ನೀರಿನ ನಿಯಮಿತ ಪರೀಕ್ಷೆ, ಕ್ಲೋರಿನೇಷನ್ ತಪಾಸಣೆ ಹಾಗೂ ಇತರೆ ಕೈಗೊಳ್ಳುವ ಕಾರ್ಯದ ಕುರಿತು ಸಂಪೂರ್ಣ ಮಾಹಿತಿ ನೀಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಬಿತ್ತನೆ ಕ್ಷೇತ್ರ, ರಸಗೊಬ್ಬರ ವಿತರಣೆ ಮತ್ತು ಬಾಕಿ ಇರುವ ದಾಸ್ತಾನು, ಬೆಳೆ ವಿಮೆಗೆ ರೈತರ ನೋಂದಣಿ ಸೇರಿದಂತೆ ಎಲ್ಲಾ ಸಂಪೂರ್ಣ ಮಾಹಿತಿ ಒದಗಿಸಿ ಎಂದು ಕೃಷಿ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ವಿವಿಧ ನಿಗಮಗಳ ಗಂಗಕಲ್ಯಾಣ ಯೋಜನೆಗಳ ಪ್ರಗತಿ ಬಗ್ಗೆ ಮಾಹಿತಿ ಪಡೆದು ಮಾತನಾಡಿದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು, ಆಯ್ಕೆಗೊಂಡ ಫಲಾನುಭವಿಗಳಿಗೆ ಯಾವುದೇ ಕಾರಣಕ್ಕೂ ವಿಳಂಬ



ಆಗದ ರೀತಿಯಲ್ಲಿ ಯೋಜನೆ ತಲುಪಿಸಬೇಕು. ವಿದ್ಯುತ್ ಸರಬರಾಜು ಹಾಗೂ ಇತರೆ ಸಮಸ್ಯೆ ಇದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಸಮನ್ವಯತೆಯಿಂದ ಪರಿಹಾರವಾಗಬೇಕು ಎಂದು ಸೂಚನೆ ನೀಡಿದರು.

ಮುಖ್ಯಮಂತ್ರಿಗಳ ಕನಸಿನ ಯೋಜನೆಯಾದ ಇಂದಿರಾ ಕ್ಯಾಂಟೀನ್‌ಗಳ ಬಗ್ಗೆ ಹೆಚ್ಚಿನ ಕಾಳಜಿ ತೋರಿಸಲಾಗುತ್ತಿದ್ದು, ಜಿಲ್ಲೆಯಲ್ಲಿ ವಿವಿಧೆಡೆ ಬಾಕಿ ಇರುವ ಇಂದಿರಾ ಕ್ಯಾಂಟೀನ್ ಗಳ ನಿರ್ಮಾಣ ಕಾಮಗಾರಿಯನ್ನು ಸ್ಥಳೀಯ ಶಾಸಕರ ಸಹಕಾರದಲ್ಲಿ ಪೂರ್ಣಗೊಳಿಸಬೇಕು. ಎಲ್ಲಾ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂದಿರಾ ಕ್ಯಾಂಟೀನ್ ಗಳಲ್ಲಿ ಸಿಸಿಟಿವಿ ಅಳವಡಿಕೆ ಮತ್ತು ನಿರ್ವಹಣೆ ಕುರಿತು ಸಂಪೂರ್ಣ ಮಾಹಿತಿ ನೀಡಬೇಕು ಎಂದು ಡಿಯುಡಿಸಿ ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ಶಕ್ತಿ, ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ ಮತ್ತು ಯುವನಿಧಿ ಯೋಜನೆಗಳ ಪ್ರಗತಿವಾರು ವರದಿ ಸಲ್ಲಿಸಬೇಕು. ಅರ್ಹ ಸಾರ್ವಜನಿಕರಿಗೆ ಯೋಜನೆಗಳು ತಲುಪಿಸುವಲ್ಲಿ ಆಗುವ ಸಮಸ್ಯೆ ಅಥವಾ ವಿಳಂಬ ಕುರಿತು ಪೂರಕ ಮಾಹಿತಿ ನೀಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಬಿ-ಖಾತಾ ವಿತರಣೆಯಲ್ಲಿ ಪ್ರಗತಿ ಹೊಂದಬೇಕು, ಬಿ-ಖಾತಾ ಅಭಿಯಾನ ಹೆಚ್ಚಾಗಿ ಆಯೋಜಿಸಬೇಕು. ತೆರಿಗೆ ಸಂಗ್ರಹಣ ವಿವರ ನೀಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಈವರೆಗೆ ನಡೆದ ಜನತಾ ದರ್ಶನ ಕಾರ್ಯಕ್ರಮಗಳಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಸಲ್ಲಿಕೆಯಾದ ಅಹವಾಲು ವಿಲೇವಾರಿ ಬಗ್ಗೆ ವಿಚಾರಿಸಿದ ಜಿಲ್ಲಾಧಿಕಾರಿಗಳು, ಬಾಕಿಯಿರುವ ಎಲ್ಲಾ ಅರ್ಜಿಗಳನ್ನು ನಿಯಾಮನುಸಾರವಾಗಿ ಇಲಾಖೆಗಳು ವಿಲೇವಾರಿ ಮಾಡಬೇಕು, ಕೇವಲ ಹಿಂಬರಹ ನೀಡುವಂತಹದ್ದಲ್ಲ, ಯಾವುದೇ ಅರ್ಜಿಗಳನ್ನುತಮ್ಮಲ್ಲಿ ಇಟ್ಟುಕೊಳ್ಳಬಾರದು. ಬಾಕಿಯಿರುವ ಪ್ರಕರಣಗಳನ್ನು ವಿಲೇ ಮಾಡುವ ಕಾರ್ಯವಾಗಬೇಕು. ಈ ಕುರಿತು ಪೂರಕ ಮಾಹಿತಿ ನೀಡಬೇಕು ಎಂದು ಎಲ್ಲಾ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ಪ್ರಕರಣಗಳ ವಿಲೇವಾರಿ ಮಾಹಿತಿ, ಎಸ್ಸಿ-ಎಸ್ಪಿ ಮತ್ತು ಟಿಎಸ್ಪಿ ಯೋಜನೆ ಅನುದಾನ ಬಳಕೆ, ಅರಣ್ಯ ಹಕ್ಕು ಕಾಯ್ದೆಯಡಿ ಬಾಕಿಯಿರುವ ಅರ್ಜಿಗಳ ಮಾಹಿತಿ ನೀಡಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.

ಸರ್ಕಾರಿ ಕಾಲೇಜುಗಳ ಜಮೀನು, ವಸತಿ ನಿಲಯ, ಅಂಗನವಾಡಿ, ಸ್ಮಶಾನ ಭೂಮಿ ಖರೀದಿ ಯಾವುದೇ ಬಾಕಿ ಇದ್ದರೂ ಗಮನಕ್ಕೆ ತರಬೇಕು. ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಭಾಗಿಯಾಗುವುದರಿಂದ ತಮ್ಮ ಇಲಾಖೆಗಳಿಗೆ ಬೇಕಾದ ಪ್ರಸ್ತಾವನೆ, ಬೇಡಿಕೆಗಳಿದ್ದಲ್ಲಿ ಮಾಹಿತಿ ನೀಡಿ ಎಂದರು.

ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಮಾಹಿತಿ ಪಡೆದುಕೊಂಡ ಅವರು, ಜಿಲ್ಲೆಯ ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ವಾರದೊಳಗಾಗಿ ಸಂಪೂರ್ಣ ಮಾಹಿತಿಯನ್ನು ಸೂಕ್ತ ನಮೂನೆಯಲ್ಲಿ ತಪ್ಪಿಲ್ಲದಂತೆ ಅಧಿಕಾರಿಗಳೇ ಖುದ್ದಾಗಿ ನಮೂದಿಸಬೇಕು. ಕಡ್ಡಾಯವಾಗಿ ಪ್ರಗತಿ ವರದಿಯನ್ನು ನಿಗದಿತ ಅವಧಿಯೊಳಗೆ ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು ಎಂದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ, ಕೃಷಿ ಜಂಟಿ ನಿರ್ದೇಶಕ ಸೋಮ್ ಸುಂದರ್, ಜಿಪಂ ಯೋಜನಾಧಿಕಾರಿ ವಿನೋದ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ರಾಘವೇಂದ್ರ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಾರ್ಮಿಕರ ಆರೋಗ್ಯ ರಕ್ಷಣೆಗೆ ಆದ್ಯತೆ ಸಂಚಾರಿ ಆರೋಗ್ಯ ಘಟಕ ವಾಹನಗಳಿಗೆ ಚಾಲನೆ

### ಸಾಂಖ್ಯಿಕ ಸಚಿವ ಡಿ.ಸುಧಾಕರ್, ಶಾಸಕ ಟಿ.ರಘುಮೂರ್ತಿ ಹೇಳಿಕೆ




**ಹಂಪಿ ಟೈಮ್ಸ್ ಚಿತ್ರದುರ್ಗ**

ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಹಾಗೂ ಅವರ ಅವಲಂಬಿತರ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ ಒದಗಿಸುವ ಸಂಚಾರಿ ಆರೋಗ್ಯ ಘಟಕದ ಎರಡು ವಾಹನಗಳಿಗೆ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ ಚಾಲನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಗುರುವಾರ ಕಾರ್ಮಿಕ ಇಲಾಖೆ ಹಾಗೂ ಕಟ್ಟಡ ಮತ್ತು ಇತರೆ ನಿರ್ಮಾಣ ಕಲ್ಯಾಣ ಮಂಡಳಿ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಸಂಚಾರಿ ಆರೋಗ್ಯ ಕ್ಲಿನಿಕ್‌ಗಳಿಗೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಕಾರ್ಮಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ಕ್ರಮವಹಿಸಿದ್ದು, ಈ ನಿಟ್ಟಿನಲ್ಲಿ ಜಿಲ್ಲೆಯ ಕಟ್ಟಡ ನಿರ್ಮಾಣ ಕಾರ್ಮಿಕರನ್ನು ಅವರಿರುವ ಸ್ಥಳಕ್ಕೆ ತೆರಳಿ ಉಚಿತವಾಗಿ ಆರೋಗ್ಯ ತಪಾಸಣೆಗೆ ಒಳಪಡಿಸುವುದು, ಚಿಕಿತ್ಸೆ ಹಾಗೂ ಸಲಹೆ ಸೇರಿದಂತೆ ಮೊದಲಾದ ಸೇವೆ ಒದಗಿಸಲು ಸಂಚಾರಿ ಆರೋಗ್ಯ ಕ್ಲಿನಿಕ್‌ಗಳು ಕಾರ್ಯಾರಂಭಗೊಂಡಿದ್ದು, ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು, ಅವರ ಅವಲಂಬಿತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಕಾರ್ಮಿಕ ಅಧಿಕಾರಿ ಅನಿಲ ಬಾಲಚಂದ್ರ ಬಗಟಿ ಮಾತನಾಡಿ, ಎರಡು ತಾಲ್ಲೂಕುಗಳಿಗೆ ಒಂದರಂತೆ ಜಿಲ್ಲೆಗೆ ಮೂರು ಸಂಚಾರಿ ಆರೋಗ್ಯ ಘಟಕ ವಾಹನಗಳು ಮಂಜೂರಾಗಿದ್ದು, ಸದ್ಯದ ಮಟ್ಟಿಗೆ ಎರಡು ವಾಹನಗಳು ಕಾರ್ಯನಿರ್ವಹಿಸಲಿವೆ ಎಂದು ಹೇಳಿದರು.

ಸಂಚಾರಿ ಆರೋಗ್ಯ ಘಟಕವು ರೂಟ್ ಮ್ಯಾಪ್‌ನಂತೆ ನಿಗಧಿತ ಸ್ಥಳಗಳಲ್ಲಿ ಕನಿಷ್ಠ 4 ಗಂಟೆ ಕಾರ್ಯನಿರ್ವಹಿಸಲಿದೆ. ಸಂಚಾರಿ ಆರೋಗ್ಯ ಘಟಕದಲ್ಲಿ ವೈದ್ಯರು ಒಳಗೊಂಡಂತೆ, ಒಟ್ಟು ಆರು ಸಿಬ್ಬಂದಿಗಳು ಕಾರ್ಯನಿರ್ವಹಿಸಲಿದ್ದಾರೆ. ಈ ಘಟಕದಲ್ಲಿ ವೈದ್ಯಕೀಯ ಉಪಕರಣಗಳು, ಪ್ರಯೋಗಾಲಯಗಳು ಹಾಗೂ ವೈದ್ಯಕೀಯ ಬಳಕೆಯ ವಸ್ತುಗಳು ಲಭ್ಯವಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಚಳ್ಳಕೆರೆ ಶಾಸಕರು ಹಾಗೂ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಟಿ.ರಘುಮೂರ್ತಿ, ಜಿಲ್ಲಾಧಿಕಾರಿ ಟಿ. ವೆಂಕಟೇಶ್, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಕಾರ್ಮಿಕ ನಿರೀಕ್ಷಕರಾದ ರಾಜಣ್ಣ, ಕುಸುಮ, ಬಾಲಕಾರ್ಮಿಕ ಯೋಜನಾ ಸೊಸೈಟಿ ಯೋಜನಾ ನಿರ್ದೇಶಕ ಪಿ.ಸತೀಶ್ ಕುಮಾರ್ ಸೇರಿದಂತೆ ಕಾರ್ಮಿಕ ಸಂಘಟನೆಗಳ ಮುಖಂಡರು ಇದ್ದರು.

## ಭಾರತೀಯ ಸೈನಿಕರ ಶ್ರೇಯಸ್ಸಿಗೆ ಮಸೀದಿಗಳಲ್ಲಿ ಇಂದು ವಿಶೇಷ ಪ್ರಾರ್ಥನೆ

**ಹಂಪಿ ಟೈಮ್ಸ್ ಹೊಸಪೇಟೆ**

ಪೆಹಲ್ಗಾಮ್ ದಾಳಿ ಹಿನ್ನೆಲೆಯಲ್ಲಿ ಭಾರತೀಯ ಸೇನೆಗಳು ಆಪರೇಷನ್ ಸಿಂಧೂರ ಕಾರ್ಯಾಚರಣೆ ನಡೆಸಿ ದೇಶ ರಕ್ಷಣೆಯಲ್ಲಿ ತೊಡಗಿದ್ದಾರೆ. ಭಾರತೀಯ ಸೈನಿಕರ ಪರವಾಗಿ ಮಸೀದಿಗಳಲ್ಲಿ ಶುಕ್ರವಾರ ಪ್ರಾರ್ಥನೆ ಸಲ್ಲಿಸಲಾಗುವುದು ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಜಡ್. ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

ವಖ್ಫ್ ಬೋರ್ಡ್ ವ್ಯಾಪ್ತಿಯ ಮಸೀದಿಗಳು ಸೇರಿದಂತೆ ರಾಜ್ಯದ ಎಲ್ಲ ಮಸೀದಿಗಳಲ್ಲಿ ದೇಶದ ಹೆಮ್ಮೆಯ ಸೈನಿಕರ ಶ್ರೇಯಸ್ಸಿ ಗಾಗಿ ಹಾಗೂ ಶಕ್ತಿ ತುಂಬಲು ಶುಕ್ರವಾರದ ವಿಶೇಷ ಪ್ರಾರ್ಥನೆ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ. ಈ ಕುರಿತು ವಖ್ಫ್ ಬೋರ್ಡ್ ಮುಖ್ಯ ಕಾರ್ಯನಿರ್ವಹಾಧಿಕಾರಿ ಗೆ ಸಚಿವರಾದ ಬಿ.ಜಡ್ ಜಮೀರ್ ಅಹಮದ್ ಖಾನ್ ಅವರು ಪತ್ರ ಬರೆದು ಸೂಚನೆ ನೀಡಿದ್ದಾರೆ.

## ಚಿತ್ರ ಸುದ್ದಿ



**ಕೂಡ್ಲಗಿಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ಅವರು ಶಾಸಕ ಡಾ.ಶ್ರೀನಿವಾಸ ಎನ್.ಟಿ ಇವರ ಉಪಸ್ಥಿತಿಯಲ್ಲಿ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ , ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಲಭ್ಯತೆ ಹಾಗೂ ಸ್ಮಶಾನಗಳ ಅಭಿವೃದ್ಧಿ ಕುರಿತಂತೆ ವಿವಿಧ ಇಲಾಖೆಯ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಗುರುವಾರ ಸಭೆ ನಡೆಸಿದರು**

## ವೀರಶೈವ ಜಂಗಮರನ್ನು ಪರಿಶಿಷ್ಟ ಜಾತಿಯಲ್ಲಿ ಸೇರಿಸದಂತೆ ಆಗ್ರಹ



**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯಾದ್ಯಂತ ನಡೆಯುತ್ತಿರುವ ಪರಿಶಿಷ್ಟ ಜನರ ಜಾತಿ ಗಣತಿಯ ಸಂದರ್ಭದಲ್ಲಿ ಮೇಲ್ವರ್ಗದ ವೀರಶೈವ ಜಂಗಮರು ಅಧಿಕೃತವಾಗಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಬರಲು ಅವಣಿಸುತ್ತಿದ್ದು, ಯಾವುದೇ ಕಾರಣಕ್ಕು ಈ ಮುಂದುವರೆದ ವೀರಶೈವ ಜಂಗಮರನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಬಾರದು ಎಂದು ರಾಜ್ಯ ಅಲೆಮಾರಿ ಸಮುದಗಳ ಒಕ್ಕೂಟ ಮತ್ತು ವಿಜಯನಗರ ಜಿಲ್ಲಾ ಬಾಬಾಸಾಹೇಬ್ ಡಾ. ಬಿ ಅರ್ ಅಂಬೇಡ್ಕರ್ ಸಂಘದ ಪದಾಧಿಕಾರಿಗಳು ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮತ್ತು ಜಿಲ್ಲಾ ಸುಮಾಜಕಲ್ಯಾಣ ಅಧಿಕಾರಿಗಳ ಮುಖಾಂತರ ಮುಖ್ಯಮಂತ್ರಿ ಮತ್ತು ಸಮಾಜ ಕಲ್ಯಾಣ ಸಚಿವರಿಗೆ ಗುರುವಾರ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಸೋಮಶೇಖರ್ ಬಣ್ಣದಮನೆ, ಸಣ್ಣ ಮಾರೆಪ್ಪ, ಸುರೇಶ್, ಶಿವಕುಮಾರ್, ಪ್ರಮೋದ್ ಕುಮಾಅರ್, ಸಿದ್ದಲಿಂಗಪ್ಪ, ಕಿನ್ನಾರಿ ಶೇಖಪ್ಪ, ಚೌಡಪ್ಪ, ಪಕ್ಕಿರಪ್ಪ, ಶೇಖರ್ ಮುಂತಾದವರು ಇದ್ದರು..